ಐಕ್ಯರಂಗ

ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿಯ ಮುಖ ಪತ್ರಿಕೆ

ಸಂಪುಟ 1 | ಸಂಚಿಕೆ 40 | ಡಿಸೆಂಬರ್ 16, 1979 | 40 ಪೈಸೆ

ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಅಭ್ಯರ್ಥಿಯನ್ನು ಗೆಲ್ಲಿಸಿರಿ

ಇತ್ತೀಚೆಗೆ ಇಂದಿರಾಗಾಂಧಿಯವರು ತಮ್ಮ ಚುನಾವಣಾ ಭಾಷಣಗಳಲ್ಲಿ ತಮ್ಮ ಹಿಂದಿನ ತಪ್ಪುಗಳಿಗೆ ಪಶ್ಚಾತ್ತಾಪಪಡುವ ಬದಲು ತನ್ನ ವರ್ತನೆಗಳನ್ನೆಲ್ಲಾ ಸಮರ್ಥನೆ ಮಾಡಿಕೊಂಡೇ ಬರುತ್ತಿದ್ದಾರೆ. ತುರ್ತುಪರಿಸ್ಥಿತಿಯನ್ನು ಜಾರಿಗೆ ತರಲು ದಿವಂಗತ ಜೆ. ಪಿ. ಯವರ "ಸಂಪೂರ್ಣ ಕ್ರಾಂತಿ" ಚಳುವಳಿಯೇ ಕಾರಣವೆಂದು ಕೆಲವು ದಿನಗಳ ಹಿಂದೆ ಹೇಳಿದ್ದಾರೆ. ತನ್ನಿಂದಲೇ ದೇಶದಲ್ಲಿ ಸುಭದ್ರ ಸರಕಾರ ಬರಲು ಸಾಧ್ಯವೆಂದೂ ಜನರ ಬೇಡಿಕೆಗಳನ್ನು ಈಡೇರಿಸಲು ಸಾಧ್ಯವೆಂದೂ ಪದೇ ಪದೇ ಉದ್ಗಾರ ತೆಗೆಯುತ್ತಿದ್ದಾರೆ. ಸತ್ಯಾಂಶಗಳನ್ನೆಲ್ಲಾ ಮರೆಮಾಚಿ ಜನತೆಯನ್ನು ಮರಳುಗೊಳಿಸಲು ಪ್ರಯತ್ನಿಸುವುದು ಖಂಡನೀಯವಾಗಿದೆ.

ಇಂದಿರಾಗಾಂಧಿಯವರು 11 ವರ್ಷಕಾಲ ಪ್ರಧಾನಮಂತ್ರಿಯಾಗಿದ್ದರು. ಗರೀಬಿ ಹಟಾವೋ ಘೋಷಣೆಕೊಟ್ಟು ಅಧಿಕಾರ ನಡೆಸಿದರು. 1975ರಲ್ಲಿ ತುರ್ತುಪರಿಸ್ಥಿತಿಯನ್ನು ಘೋಷಿಸಿ ಎರಡು ವರ್ಷ ಸರ್ವಾಧಿಕಾರ ನಡೆಸಿದರು. ಕೊನೆಗೆ ಪರಿಣಾಮವೇನಾಯಿತು ? ಗುತ್ತೇದಾರಿ ಬಂಡವಾಳಶಾಹಿಗಳೂ, ಶ್ರೀಮಂತರೂ ಇನ್ನೂ ದೊಡ್ಡ ಶ್ರೀಮಂತರಾದರು. ಬಡವರು ಇನ್ನೂ ಹೆಚ್ಚು ಬಡವರಾದರು. ಬಡತನದ ರೇಖೆಯ ಕೆಳಗಿನ ಜನಸಂಖ್ಯೆಯು ಶೇ. 46 ರಿಂದ ಶೇಕಡ 70ಕ್ಕೇರಿತು.

ಸಂಪಾದಕೀಯ

ತುರ್ತುಪರಿಸ್ಥಿತಿಯಲ್ಲಿ ಎಲ್ಲ ನಾಗರಿಕ ಹಕ್ಕುಗಳೂ ನಾಶವಾದವು. ಲಕ್ಷಾಂತರ ಜನರನ್ನು ಬಂಧಿಸಲಾಯಿತು. ಮಿತಿಮೀರಿದ ದೌರ್ಜನ್ಯ ನಡೆಯಿತು. ರೈತಕಾರ್ಮಿಕರ ಸಂಘಟನೆಗಳಿಗೆ ಧಕ್ಕೆ ಒದಗಿತು. ಅವರ ಮೇಲೆ ಹೆಚ್ಚು ಹೊರೆ ಹೊರಿಸಲಾಯ್ತು.

ಯಾವ ರಾಜ್ಯದಲ್ಲೂ ಭದ್ರ ಸರಕಾರವೆಂಬುದಿರಲಿಲ್ಲ. ಮುಖ್ಯಮಂತ್ರಿಗಳ ಬದಲಾವಣೆ ಮೇಲಿಂದ ಮೇಲೆ ನಡೆದು ಎಲ್ಲರೂ ಭಯದಿಂದ ನಡುಗುತ್ತಿದ್ದರು.

ಈ ದುರಾಡಳಿತೆಗೆ ಸುಭದ್ರ ಸರಕಾರವೆಂದು ಅವರು ಹೇಳುತ್ತಿದ್ದಾರೆ.

ಜನತಾಪಕ್ಷ ಜನತೆಯ ಆಶೋತ್ತರಗಳನ್ನು ಈಡೇರಿಸುವುದರಲ್ಲಿ ವಿಫಲಗೊಂಡಿರುವುದು ನಿಜ. ಜಗಜೀವನ್‌ರಾಂ ಅವರು ಪ್ರಧಾನ ಮಂತ್ರಿಯಾಗುವುದರಿಂದ ಎಂಬುದನ್ನೂ ನಾವು ಒಪ್ಪಲು ಸಾಧ್ಯವಿಲ್ಲ.

ದೇಶದ ಸಮಸ್ಯೆ ಪರಿಹಾರವಾಗಬೇಕಾದರೆ ಈ ಎರಡು ಶಕ್ತಿಗಳನ್ನೂ ಸೋಲಿಸಿ, ಸರ್ವಾಧಿಕಾರಿ ವಿರೋಧಿ, ಜಾತೀಯ ವಿರೋಧಿ ಶಕ್ತಿಗಳನ್ನು ಅದರಲ್ಲೂ ಮುಖ್ಯವಾಗಿ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಉಮೇದುವಾರರನ್ನು ಗೆಲ್ಲಿಸುವುದು ಅಗತ್ಯ. ●

ಜನತೆಯ ನಿಜವಾದ ಪ್ರತಿನಿಧಿಗಳನ್ನು ಆಯ್ಕೆ ಮಾಡಿ

ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಅಭ್ಯರ್ಥಿಗಳಿಗೆ ಮತ ನೀಡಿ

ಏಳನೇ ಲೋಕಸಭಾ ಚುನಾವಣೆಯ ತಯಾರಿಗಳು ಭರದಿಂದ ನಡೆದಿದೆ. ಮುಂದಿನ ಐದು ವರ್ಷಗಳ ಕಾಲ ತನಗೆ ಯಾರು ಹಿತವರು ಎಂಬುದನ್ನು ಮತದಾರ ನಿರ್ಧರಿಸಬೇಕಾಗಿದೆ. ಪ್ರತಿಯೊಂದು ಚುನಾವಣೆಗಳ ಸಮಯದಲ್ಲಿಯೂ ರಾಜಕೀಯ ಪಕ್ಷಗಳು ಮತದಾರನಿಗೆ ಬಾಯಿತುಂಬಾ ಭರವಸೆ ನೀಡಿ, ನಂತರ ಬಾಯಿಯನ್ನೇ ಬಂದು ಮಾಡಿರುವುದನ್ನು ನಾವು ನೋಡಿದ್ದೇವೆ. ಮಾತನಾಡಲು ಸ್ವಾತಂತ್ರ್ಯ ಕೊಟ್ಟಿದ್ದೇವೆ ಮಾತನಾಡಬಹುದು ಆದರೆ ಬೇಡಿಕೆಗಳನ್ನಿಟ್ಟು ಹೋರಾಡುವಂತಿಲ್ಲವೆಂದು ಮಿಸಿ ಮೀಸಾ ತಂದು ಜನರನ್ನು ನಡುನೀರಿನಲ್ಲಿ ಕೈ ಬಿಟ್ಟ ಎರಡೂವರೆ ವರ್ಷದ ಅಧಿಕಾರವನ್ನು ಕಂಡಿದ್ದೇವೆ. ಇಪ್ಪತ್ತು ಅಂಶಗಳ ಕಾರ್ಯಕ್ರಮದ ಹೆಸರಿನಲ್ಲಿ ಅಧಿಕಾರಕ್ಕೆ ಬಂದ ಇಂದಿರಾಗಾಂಧಿಯವರು ಬಡ ಜನತೆಯ ಹೋರಾಟಗಳನ್ನು ಹತ್ತಿಕ್ಕಲು ತುರ್ತುಪರಿಸ್ಥಿತಿಯನ್ನು ಜಾರಿಗೆ ತಂದು ದೇಶದಲ್ಲಿ ಸರ್ವಾಧಿಕಾರವನ್ನು ಬೆಳೆಸಿದರು. ಸಂಜಯಗಾಂಧಿ, ಬನ್ಸೀಲಾಲ್, ಶುಕ್ಲಾ ಮುಂತಾದ ಕೆಲಸಕ್ಕೆ ಬಾರದ ಅಯೋಗ್ಯ ವ್ಯಕ್ತಿಗಳು ಅಧಿಕಾರವನ್ನು ಹಿಡಿದುಕೊಂಡು ಪ್ರಜಾಸತ್ತೆಯನ್ನು ಗೋರಿ ಮಾಡಿದರು. ಕೆಲವೇ ವ್ಯಕ್ತಿಗಳು ಹೇಳಿದಂತೆ ಕೇಳುವ ಆಡಳಿತವರ್ಗ ಸಾವಿರಾರು ಜನರನ್ನು ಸದ್ದಿಲ್ಲದಂತೆ ಸಾವಿಗೆ ನೂಕಿ ದೇಶ ಸುಭಿಕ್ಷವಾಗಿದೆ ಎಂದು ಸಮಾಚಾರಗಳನ್ನು ಸಾರಿತು.

1977ರ ಚುನಾವಣೆಯಲ್ಲಿ ಜನತೆ ಸರ್ವಾಧಿಕಾರಿ ಶಕ್ತಿಗಳಿಗೆ ಸರಿಯಾದ ಪಾಠ ಕಲಿಸಿದರು. ಜನರಲ್ಲಿ ಬಹಳಷ್ಟು ಆಸೆ, ಆಕಾಂಕ್ಷೆಗಳನ್ನು ಹುಟ್ಟಿಸಿದ ಜನತಾಪಕ್ಷ ಅಧಿಕಾರಕ್ಕೆ ಬಂತು. ಬಂದ ಸ್ವಲ್ಪ ದಿನಗಳಲ್ಲಿಯೇ ಆರ್. ಎಸ್. ಎಸ್. ಆಡಳಿತ ಯಂತ್ರದ ಎಲ್ಲಾ ವಿಭಾಗಗಳಲ್ಲೂ ತೂರಿಕೊಂಡಿತು, ಮಾಜೀಜನಸಂಘೀಯರುತಮ್ಮಸಂಖ್ಯಾಬಲವನ್ನು ಮುಂದೆ ಮಾಡಿ ಪ್ರಧಾನ ಮಂತ್ರಿ ತಮ್ಮ ತಾಳಕ್ಕೆ ತಕ್ಕಂತೆ ಕುಣಿಯುವಂತೆ ನಿರ್ಬಂಧಪಡಿಸಿದ್ದಲ್ಲದೆ, ಜನಸಂಘೇತರ ಮೂವರು ಮುಖ್ಯಮಂತ್ರಿಗಳನ್ನು ಬದಲಾಯಿಸಲಾಯಿತು. ಒಳಜಗಳ, ಅಧಿಕಾರಕ್ಕಾಗಿ ಕಚ್ಚಾಟ, ಕಾಂಗ್ರೆಸ್ಸಿನ ಬಂಡವಾಳಶಾಹಿ ಆರ್ಥಿಕ ನೀತಿಯ ಅನುಸರಣೆಯಿಂದಾಗಿ ದುಡಿಯುವ ವರ್ಗದ ಹೋರಾಟಗಳನ್ನು ಮುರಿಯುವ ಭೂತಲಿಂಗಂ ವರದಿ, ಕೈಗಾರಿಕಾ ಬಾಂಧವ್ಯ ಮಸೂದೆಗಳನ್ನು

[ಕಡೆಯ ಪುಟ ನೋಡಿ]

ಚುನಾವಣೆಗಳು ಹಾಗೂ ಪತ್ರಿಕಾ ಸ್ವಾತಂತ್ರ

ತಾ. 7-12-79ರಂದು ನವದೆಹಲಿಯಲ್ಲಿ "ಚುನಾವಣೆಗಳು ಹಾಗೂ ಪತ್ರಿಕೆಗಳು" ಎಂಬ ವಿಷಯದ ಮೇಲೆ ವಿಚಾರ ಸಂಕಿರಣ ನಡೆಯಿತು. ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ)ದ ಪೊಲಿಟ್‌ಬ್ಯೂರೋ ಸದಸ್ಯರಾದ ಕಾಂ. ಹರಿಕಿಷನ್ ಸಿಂಗ್ ಸುರ್ಜಿತ್‌ರವರು ಸಂಕಿರಣದಲ್ಲಿ ಮಂಡಿಸಿದ ಅಭಿಪ್ರಾಯಗಳ ಆಯ್ದ ಭಾಗಗಳನ್ನು ಇಲ್ಲಿ ಕೊಡಲಾಗಿದೆ.

ಪತ್ರಿಕೆಗಳು ಜನಾಭಿಪ್ರಾಯವನ್ನು ರೂಪಿಸುವುದರಲ್ಲಿ ಪ್ರಮುಖ ಪಾತ್ರ ವಹಿಸುತ್ತವೆ ಎಂಬುದರಲ್ಲಿ ಸಂಶಯವಿಲ್ಲ. ಆದರೆ ಪತ್ರಿಕೆಗಳು ಆ ಕೆಲಸವನ್ನು ಮಾಡುತ್ತಿವೆಯೇ ? ಎಂದು ಪ್ರಶ್ನಿಸಬೇಕಾಗಿದೆ ಪ್ರಶ್ನೆ ಎದ್ದಿರುವ ಸಂದರ್ಭವನ್ನು ನೋಡಿದರೆ. ದೇಶ ಈಗಾಗಲೇ ಮುಂಬರುವ ಲೋಕಸಭಾ ಚುನಾವಣೆಯನ್ನು ಎದುರಿಸುವಲ್ಲಿ ಮಗ್ನವಾಗಿದೆ. ಮತದಾನದ ಮೂಲಕ ನಡೆಯಲಿರುವ ಈ ಮಹಾಯುದ್ಧದಲ್ಲಿ ಮತದಾನದ ಮುಂದಿರುವ ಮುಖ್ಯ ವಿಷಯ ಯಾವುದು ? ಕಳೆದ ಚುನಾವಣೆಯ ಮುಖ್ಯ ಘೋಷಣೆ ಮತ್ತು ನಂತರ ನಡೆದ ಘಟನೆಗಳು ಎಲ್ಲರಿಗೂ ತಿಳಿದಿದೆ.

ನನ್ನ ಪಕ್ಷ ಹಾಗೂ ಇತರೆ ಎಡ ಮತ್ತು ಪ್ರಜಾಸತ್ತಾತ್ಮಕ ಶಕ್ತಿಗಳು ಈ ಬಾರಿ ಸರ್ವಾಧಿಕಾರಿ, ಜಾತೀಯವಾದಿ ಶಕ್ತಿಗಳನ್ನು ಸೋಲಿಸಲು ಮತದಾರರಿಗೆ ಕರೆ ನೀಡಿದ್ದೇವೆ. ಈ ಎರಡೂ ಶಕ್ತಿಗಳು ಅನುಸರಿಸಿದ ಆರ್ಥಿಕ ನೀತಿಯನ್ನು ನಾವು ತಿರಸ್ಕರಿಸಿದ್ದೇವೆ. ಅಂದರೆ ಈ ಚುನಾವಣೆಯಲ್ಲಿ ಮತದಾರರು ಇಂದಿರಾ ಕಾಂಗ್ರೆಸ್ ಮತ್ತು ಜನತಾಪಕ್ಷಗಳನ್ನು ಸೋಲಿಸಿ, ಪ್ರಜಾಸತ್ತಾತ್ಮಕ, ಜಾತ್ಯಾತೀತ ಮತ್ತು ದೇಶದ ಒಗ್ಗಟ್ಟನ್ನು ಉಳಿಸಿಕೊಂಡು ಬರುವ ಶಕ್ತಿಗಳನ್ನು ಗೆಲ್ಲಿಸಬೇಕಾಗಿದೆ. ಏಕೆಂದರೆ, ಸ್ವಾತಂತ್ರ್ಯ ಹೋರಾಟಕ್ಕಾಗಿ ನಡೆದ ರಾಷ್ಟ್ರೀಯ ಹೋರಾಟ ಪ್ರಜಾಸತ್ತೆ. ಜಾತ್ಯಾತೀತತೆ ಮತ್ತು ದೇಶದ ಏಕತೆಯ ಆಧಾರದಲ್ಲಿಯೇ ನಡೆದದ್ದು. ಪತ್ರಿಕೆಗಳು ಕೂಡಾ ಈ ಮೌಲ್ಯಗಳನ್ನು ಉಳಿಸಿಕೊಳ್ಳಲು ಶ್ರಮಿಸಬೇಕಾಗಿದೆ. ಇಲ್ಲವಾದಲ್ಲಿ; ಪತ್ರಿಕಾ ಸ್ವಾತಂತ್ರ್ಯವೆಂಬುದು ಅರ್ಥವಿಲ್ಲದ ಮಾತಾಗುತ್ತದೆ.

ತುರ್ತುಪರಿಸ್ಥಿತಿಯ ಹಿಂದಿನ ದಿನಗಳನ್ನು ನೋಡೋಣ, ಜನತೆಯ ಮೂಲಭೂತ ಹಕ್ಕುಗಳ ಜೊತೆಪತ್ರಿಕಾ ಸ್ವಾತಂತ್ರ್ಯವನ್ನೂ ಕಸಿದುಕೊಳ್ಳಲಾಗಿದ್ದ ಈ ದಿನಗಳನ್ನು ಹೋಲಿಸಿದರೆ, ಬ್ರಿಟೀಷರ ಕಾಲದಲ್ಲಿಯೂ ಇಂತಹ ದಬ್ಬಾಳಿಕೆಗಳು ನಡೆದಿರಲಿಲ್ಲ. ಸರಕಾರದ ಹೇಳಿಕೆಗಳನ್ನು ಡಂಗೂರ ಹೊಡೆಯುವುದನ್ನು ಬಿಟ್ಟು ಬೇರೇನೂ ಮಾಡದಂತಹ ಅಸಹಾಯಕ ಪರಿಸ್ಥಿತಿಗೆ ಪತ್ರಿಕೆಗಳು ಒಳಗಾಗಿದ್ದವು; ಯಾರು ನೆಹರೂ ಹೆಸರನ್ನು ಹೇಳಿಕೊಂಡು ದೇಶದಲ್ಲಿ ಮತದಾರರ ಬಳಿ ಹೋಗುತ್ತಿದ್ದಾರೋ, ಅದೇ ವ್ಯಕ್ತಿಗಳು ನೆಹರೂ ಬರವಣಿಗೆಗಳಿಂದ ಉದ್ಧರಿಸಿದ ವಾಕ್ಯಗಳನ್ನು ಸಹಾ ಪತ್ರಿಕೆಗಳಲ್ಲಿ ಪ್ರಕಟವಾಗಲು ಬಿಡಲಿಲ್ಲ. ರವೀಂದ್ರನಾಥ ಠಾಗೋರರ ಬರವಣಿಗೆಗಳಿಗೂ ಇದೇ ಗತಿಯಾಯಿತು. ತುರ್ತುಪರಿಸ್ಥಿತಿಯನ್ನು ವಿರೋಧಿಸುವ ಪತ್ರಿಕೆಗಳಿಗೆ ಜಾಹೀರಾತುಗಳನ್ನು ನೀಡದಿರಲು ಸಂಜಯಗಾಂಧಿ ಆದೇಶ ನೀಡಿದ್ದರು. ನನ್ನ ಪಕ್ಷದ ಸಣ್ಣದೊಂದು ಮುದ್ರಣಾಲಯ ದೆಹಲಿಯಲ್ಲಿದೆ. ತುರ್ತುಪರಿಸ್ಥಿತಿಯನ್ನು ವಿರೋಧಿಸಿ ಕರಪತ್ರವೊಂದನ್ನು ಹೊರಡಿಸಿದ ತಪ್ಪಿಗಾಗಿ ಮುದ್ರಣಾಲಯ ಒಂದು ಲಕ್ಷ ರೂಪಾಯಿ ಠೇವಣಿಯನ್ನು ಇಡಬೇಕೆಂದು ಸರಕಾರ ಕೇಳಿದ್ದಲ್ಲದೆ, ವ್ಯವಸ್ಥಾಪಕರು ಸೆರೆಮನೆಗೆ ಹೋಗಬೇಕಾಯಿತು. ಇಂತಹ ಘಟನೆಗಳನ್ನು ಯಾವುದೇ ಪತ್ರಿಕೆಯಾಗಲೀ, ಪ್ರಜಾಪ್ರಭುತ್ವ ಶಕ್ತಿಗಳಾಗಲೀ ಮರೆಯುವುದಕ್ಕೆ ಸಾಧ್ಯವಿಲ್ಲ. ಇಂತಹಅನುಭವಗಳಿಂದಲೇ 1977ರ ಚುನಾವಣೆಗಳ ಸಮಯದಲ್ಲಿ ಪತ್ರಿಕೆಗಳು ಸರಿಯಾದ ಭೂಮಿಕೆಯನ್ನು ವಹಿಸಿದ್ದವು. ಈಗ ಮತ್ತೊಮ್ಮೆ ಪತ್ರಿಕೆಗಳು ಮುಖ್ಯ ಪಾತ್ರವನ್ನು ವಹಿಸಬೇಕಾಗಿದೆ. ಆದರೆ, ವಿಷಾದದ ಸಂಗತಿಯೆಂದರೆ ಕೆಲವು ಪತ್ರಿಕೆಗಳು ಮಾತ್ರ ಇಂದಿರಾಗಾಂಧಿ, ಸಂಜಯಗಾಂಧಿಗಳ ಮುಕ್ತಕಗಳನ್ನೇ

[ಕಡೆಯ ಪುಟ ನೋಡಿ]

ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಕೇಂದ್ರ ಸಮಿತಿ ಲೋಕಸಭಾ ಚುನಾವಣೆಗಳಲ್ಲಿ ಸ್ಪರ್ಧಿಸಲಿರುವ ಪಕ್ಷದ ಪ್ರಥಮ ಪಟ್ಟಿಯನ್ನು ಪ್ರಕಟಿಸಿದೆ.

ಪಶ್ಚಿಮ ಬಂಗಾಳ	ಅಭ್ಯರ್ಥಿಗಳ ಹೆಸರು
1. ಜಲಪೈಗುರಿ	ಸುಬೋಧ ಸೇನ್
2. ಡಾರ್ಜಿಲಿಂಗ್	ಆನಂದ ಪಾಠಕ್
3. ರಾಯ್‌ಗಂಜ್	ಅಬ್ದುಲ್ ಹಾಫೀಜ್
4. ಮಾಲ್ಡಾ	ದಿನೇಶ್ ಜೋರ್‌ದಾರ್
5. ಜಂಗೀಪುರ್	ಜೈನಲ್‌ಅಬ್‌ದೀನ್
6. ಮುರ್ಷಿದಾಬಾದ್	ಮಸೂದಲ್ ಹಸನ್
7. ಕೃಷ್ಣನಗರ್	ಆರ್. ಪಿ. ದಾಸ್
8. ನವದ್ವೀಪ್ (ಮೀಸಲು)	ಬಿವಾಘೋಷ್ ಗೋಸ್ವಾಮಿ
9. ಮಥುರಾಪುರ (ಮೀಸಲು)	ಮುಕುಂದ್ ಮಂಡಲ್
10. ಡೈಮಂಡ್ ಹಾರ್ಬರ್	ಜ್ಯೋತಿರ್ಮಯ ಬಸು
11. ಜಾಧವಪುರ್	ಸೋಮನಾಥ್ ಚಟರ್ಜಿ
12. ಬ್ಯಾರೆಕ್‌ಪುರ್	ಮೊಹಮ್ಮದ್ ಇಸ್ಮಾಯಿಲ್
13. ಡಮ್‌ಡಮ್	ನಿರೇನ್ ಘೋಷ್
14. ಕಲ್ಕತ್ತ (ಈಶಾನ್ಯ)	ಸುನೀಲ್ ಮೊಯಿತ್ರಾ
15. ಕಲ್ಕತ್ತ (ದಕ್ಷಿಣ)	ಸತ್ಯ ಸಾಧನ ಚಕ್ರವರ್ತಿ
16. ಹೌರಾ	ಸಮರ್ ಮುಖರ್ಜಿ
17. ಉಲುಬೇರಿಯ	ಹನ್ನನ್ ಮೊಲ್ಲಾ
18. ಸೆರಾಮ್‌ಪೂರ್	ದಿನೇನ್ ಭಟ್ಟಾಚಾರ್ಯ
19. ಹೂಗ್ಲಿ	ರೂಪ್ ಚಂದ್ ಪಾಲ್
20. ಆರಾಮ್‌ಬಾಗ್	ಬಿಜಯ ಮೋದಕ್
21. ತಾಮ್ಲುಕ್	ಸತ್ಯ ಗೋಪಾಲ್ ಮಿಶ್ರ
22. ಕಾಂಟಾಯ್	ಸುಧೀರ್ ಗಿರಿ
23. ಝಾರ್‌ಗ್ರಾಮ್(ಮೀಸಲು)	ಮೋತಿಲಾಲ್ ಹನ್ಸ್‌ಡಾ
24. ಬಾಂಕುರ	ಬಸುದೇವ ಆಚಾರ್ಯ
25. ವಿಷ್ಣುಪುರ (ಮೀಸಲು)	ಅಜಿತ್ ಸಾಹಾ
26. ದುರ್ಗಾಪುರ (ಮೀಸಲು)	ಕೃಷ್ಣಾ ಹಲ್ದಾರ್
27. ಅಸನ್‌ಸಾಲ್	ರಾಬಿನ್ ಸೇನ್
28. ಬರ್ದ್ವಾನ್	ಸುಶೀಲ್ ಭಟ್ಟಾಚಾರ್ಯ
29. ಕಟ್ವಾ	ಸೈಪುದ್ದೀನ್ ಚೌಧರಿ
30. ಬೋಲ್‌ಪುರ್	ಸರದೀಶ್ ರಾಯ್
31. ವೀರ್‌ಭೂಮ್ (ಮೀಸಲು)	ಗದಾಧರ್ ಸಹಾ
ಕೇರಳ	
32. ಕಾಸರಗೋಡು	ಎಂ. ರಾಮಣ್ಣ ರೈ
33. ಪಾಲ್ಘಾಟ್ (ಪಾಲ್ಘಾಟ್)	ಟಿ. ಶಿವದಾಸ್ ಮೆನನ್
34. ಒಟ್ಟಪಾಲಂ (ಮೀಸಲು)	ಎ. ಕೆ. ಬಾಲನ್
35. ಮುಕುಂದಪುರಂ	ಈ. ಬಾಲಾನಂದನ್
36. ಇಡುಕ್ಕಿ	ಎಂ. ಎಂ. ಲಾರೆನ್ಸ್
37. ಅಲೆಪ್ಪಿ	ಶ್ರೀಮತಿ ಸುಶೀಲಾ ಗೋಪಾಲನ್
38. ಕಲ್ಲಿಕೋಟೆ	ಇಂಬಿಚ್ಚಿ ಬಾವಾ
ತಮಿಳುನಾಡು	
39. ಮಧುರೈ	ಎ. ಬಾಲಸುಬ್ರಮಣ್ಯಂ
40. ತಿರುಚಿನಾಪಳ್ಳಿ	ಟಿ. ಕೆ. ಗಂಗರಾಜನ್
41. ಚಿದಂಬರಂ (ಮೀಸಲು)	ಪಿ. ಎಸ್. ಮಹಾಲಿಂಗಂ
ಪಂಜಾಬ್	
42. ಫಿಲ್ಲೋರ್	ಮಾಸ್ಟರ್ ಭಗತ್‌ರಾಂ
ಮಧ್ಯಪ್ರದೇಶ	
43. ದುರ್ಗ	ಪಿ. ಕೆ. ಮೊಯಿತ್ರಾ
ಮಹಾರಾಷ್ಟ್ರ	
ಊಂಬಾಯಿ ನಾರ್ತ್-ಸೆಂಟ್ರಲ್	ಶ್ರೀಮತಿ ಅಹಲ್ಯಾ ರಂಗಣೇಕರ್
45. ದಹಾಣು (ಮೀಸಲು)	ಲಹಾಣು ಶಿದಾವಾ ಕೊಂ
46. ವಾರ್ಧಾ	ರಾಮಚಂದ್ರ ಗಂಘಾರೆ
ಒರಿಸ್ಸಾ	
47. ಭುವನೇಶ್ವರ್	ಶಿವಾಜಿ ಪಟ್ನಾಯಿಕ್
ತ್ರಿಪುರಾ	
48. ತ್ರಿಪುರಾ ಪಶ್ಚಿಮ	ಅಜಯ ಬಿಸ್ವಾಸ್
49. ತ್ರಿಪುರಾ ಪೂರ್ವ	ಬಾಜುಬಾನ್ ರಿಯಾಂಗ್
ಅಂಡಮಾನ್ ಮತ್ತು ನಿಕೋಬಾರ್	
50. ಅಂಡಮಾನ್‌ನಿಕೋಬಾರ್ ದ್ವೀಪ	ಪಿ. ಕೆ. ಎಸ್. ಪ್ರಸಾದ್.

ಹೋರಾಡುತ್ತಿರುವ ಕಾರ್ಮಿಕರಿಗೆ ಬೆಂಬಲ

ಹುಬ್ಬಳ್ಳಿ ನಗರದ ಗೋಕುಲ ರಸ್ತೆಯಲ್ಲಿರುವ ಕರ್ನಾಟಕ ಸಿಮೆಂಟ್ ಪೈಪ್ ಕಾರ್ಖಾನೆಯ ಕಾರ್ಮಿಕರು ತಾರೀಖು 3-12-79 ರಿಂದ ವೇತನ ಏರಿಕೆ, ತುಟ್ಟಿಭತ್ಯೆ ಮುಂತಾದ ತಮ್ಮ ಬೇಡಿಕೆಗಳ ಬಗ್ಗೆ ಅನಿರ್ದಿಷ್ಟ ಉಪವಾಸ ಮುಷ್ಕರವನ್ನು ಪ್ರಾರಂಭಿಸಿದ್ದಾರೆ. ಕಳೆದ ಆರು ತಿಂಗಳಿಂದ ತಮ್ಮ ಬೇಡಿಕೆಗಳ ಬಗ್ಗೆ ಆಡಳಿತ ವರ್ಗವನ್ನು ಒತ್ತಾಯಿಸುತ್ತಿರುವ ಕಾರ್ಮಿಕರು, ಮಾಲೀಕರಿಂದ ಯಾವಪ್ರತಿಕ್ರಿಯೆಯೂ ಇಲ್ಲದಿರುವುದರಿಂದ ಅನಿವಾರ್ಯವಾಗಿ ಮುಷ್ಕರಕ್ಕೆ ಇಳಿಯಬೇಕಾಗಿದೆ.

ಇದೇ ರೀತಿ ಬೆಂಗಳೂರಿನಲ್ಲಿ ಮೈಕೋ ಕಾರ್ಮಿಕರು ಎರಡು ತಿಂಗಳಿಂದ ಮುಷ್ಕರ ನಡೆಸುತ್ತಿದ್ದರೂ 7 ಸಾವಿರ ಕಾರ್ಮಿಕರ ಹಿತವನ್ನು ಕಡೆಗಣಿಸಿ ಸರಕಾರ ಮತ್ತು ಆಡಳಿತ ವರ್ಗ ದಬ್ಬಾಳಿಕೆಯ ತಂತ್ರಗಳನ್ನು ಅನುಸರಿಸುತ್ತಿವೆ.

ದಾಂಡೇಲಿಯ ವೆಸ್ಟ್ ಕೋಸ್ಟ್ ಪೇಪರ್ ಮಿಲ್ಲಿನ ಐದು ಸಾವಿರ ಕಾರ್ಮಿಕರು ತಮ್ಮ ಬೇಡಿಕೆಗಳಿಗಾಗಿ ಹಲವಾರು ದಿನಗಳಿಂದ ಹೋರಾಟ ನಡೆಸುತ್ತಿದ್ದಾರೆ.

ಉತ್ತರ ಕರ್ನಾಟಕ ಕಾರ್ಮಿಕ ಸಂಘಗಳ ಸಮನ್ವಯ ಸಮಿತಿ ಹಾಗೂ ಅದರ ಸೇರ್ಪಡೆಯಾದ ಕಾರ್ಮಿಕ ಸಂಘಗಳು ಮೇಲ್ಕಾಣಿಸಿದ ಹೋರಾಟಗಳಿಗೆ ತಮ್ಮ ಸಂಪೂರ್ಣ ಬೆಂಬಲ ವ್ಯಕ್ತಪಡಿಸಿವೆ. ಕಾರ್ಮಿಕರ ಬೇಡಿಕೆಗಳನ್ನು ಕೂಡಲೇ ಇತ್ಯರ್ಥಪಡಿಸಲು ಸರಕಾರ ಹಾಗೂ ಆಯಾ ಕಾರ್ಖಾನೆಗಳ ಮಾಲೀಕರಿಗೆ ಕರೆ ನೀಡಿರುವ ಸಮನ್ವಯ ಸಮಿತಿ, ಉತ್ತರ ಕರ್ನಾಟಕ ಕಾರ್ಮಿಕರು ಹೋರಾಡುತ್ತಿರುವ ದುಡಿಯುವ ವರ್ಗದ ವಿಜಯಕ್ಕೆ ತನ್ನಿಂದಾಗುವ ಎಲ್ಲಾ ಸಹಾಯ ಮಾಡುವುದೆಂದು ಸಮನ್ವಯ ಸಮಿತಿಯ ಸಂಚಾಲಕ ಕಾಂ. ಎಂ. ಸದಾನಂದ ತಿಳಿಸಿದ್ದಾರೆ.

○

ಅಗತ್ಯವಸ್ತುಗಳ ಸರಿಯಾದ ವಿತರಣೆಗೆ ಒತ್ತಾಯ

ಕೋಲಾರ ಜಿಲ್ಲಾ ಶಿಡ್ಲಘಟ್ಟ ತಾಲ್ಲೂಕು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷ ತಾ. 12-12-79ರಂದು ತಹಸೀಲ್ದಾರರಿಗೆ ಮನವಿಯೊಂದನ್ನು ಸಲ್ಲಿಸಿ, ತಾಲ್ಲೂಕಿನಲ್ಲಿ ಆಹಾರ ಧಾನ್ಯಗಳು ಹಾಗೂ ಅಗತ್ಯ ವಸ್ತುಗಳು ಎಲ್ಲರಿಗೂ ಸಿಗುವಂತೆ ವ್ಯವಸ್ಥೆ ಮಾಡಲು ಕೋರಿದೆ. ಇದಕ್ಕಾಗಿ ಕೆಲವು ಸಲಹೆಗಳನ್ನು ಮುಂದಿಟ್ಟಿರುವ ಪಕ್ಷದ ಮುಖಂಡರು ನ್ಯಾಯಬೆಲೆ ಅಂಗಡಿಗಳು ಪ್ರತ್ಯೇಕವಾಗಿರಬೇಕು, ಅವುಗಳಿಗೆ ನಾಮಫಲಕಗಳು ಹಾಕಬೇಕು, ಮತ್ತು ಅವು ಕೆಲಸದ ವೇಳಾಪಟ್ಟಿಯನ್ನು ಪ್ರಕಟಿಸಬೇಕೆಂದು ಒತ್ತಾಯಿಸಿದೆ.

ಅಲ್ಲದೆ, ಸಾಮಾನ್ಯ ಅಂಗಡಿಗಳಲ್ಲೇ ಸರಕಾರ ಸರಬರಾಜು ಮಾಡುವ ಆಹಾರ ಧಾನ್ಯಗಳ ಮಾರಾಟ ನಡೆಯುತ್ತಿರುವುದರಿಂದ, ಕಾಳಸಂತೆ ಖದೀಮರಿಗೆ ಅನುಕೂಲವಾಗಿದೆ. ಆದ್ದರಿಂದ ಪ್ರತ್ಯೇಕ ನ್ಯಾಯಬೆಲೆ ಅಂಗಡಿಗಳು ಹಾಗೂ ಪಡಿತರ ಪದ್ಧತಿಯನ್ನು ಕಾರ್ಡ್ ಮೂಲಕ ಜಾರಿಗೆ ತರಬೇಕೆಂದು ಮನವಿಯಲ್ಲಿ ಕೇಳಲಾಗಿದೆ. ತಹಸೀಲ್ದಾರರಿಗೆ ಈ ಬಗ್ಗೆ ವಿವರವಾಗಿ ಸಮಸ್ಯೆಯನ್ನು ವಿವರಿಸಲಾಗಿದೆ. ನಗರದಲ್ಲಿ "ಡಿಪೋಗಳವರಿಗೆ ಸೂಚನೆ" ಎಂಬ ಪೋಸ್ಟರ್‌ಗಳನ್ನು ಸಹಾ ಹಾಕಲಾಗಿದೆ.

○

ವಿದ್ಯಾರ್ಥಿಗಳಿಂದ ಪ್ರತಿಭಟನೆ

ದಿ. 3-12-79 ರಂದು ಭಾರತೀಯ ವಿದ್ಯಾರ್ಥಿ ಫೆಡರೇಷನ್ನಿನ (ತುಮಕೂರು ಶಾಖೆಯ) ಕಾರ್ಯಕರ್ತರುಗಳು ಸಿ. ಪಿ. ಎಂ. ಕಾರ್ಯಕರ್ತರುಗಳೊಂದಿಗೆ ಸೇರಿ, ಕೋಮುವಾದಿ ಮತ್ತು ಸರ್ವಾಧಿಕಾರಿ ಶಕ್ತಿಗಳಿಗೆ ಧಿಕ್ಕಾರ! ಸಮಾಜಘಾತುಕ ಶಕ್ತಿಗಳಿಗೆ ಧಿಕ್ಕಾರ! ಹಿಂದುಳಿದ ಕೋಮುಗಳ ವಿದ್ಯಾರ್ಥಿಗಳಿಗೆ ಜಾತಿ ಸರ್ಟಿಫಿಕೇಟನ್ನು ಮಾಡಿಕೊಡುವುದರ ಬಗ್ಗೆ ವಿಳಂಬಮಾಡುತ್ತಿರುವ ಅಧಿಕಾರಿಗಳಿಗೆ ಧಿಕ್ಕಾರ! ಅಮೆರಿಕನ್ ಸಾಮ್ರಾಜ್ಯಶಾಹಿಗಳಿಗೆ ಧಿಕ್ಕಾರ! ಇರಾನಿಯನ್ ಸ್ಟೂಡೆಂಟ್ಸ್ ಅಸೋಸಿಯೇಷನ್‌ನವರು ಸರ್ವಾಧಿಕಾರಿ ಶಕ್ತಿಗಳ ವಿರುದ್ಧ ನಡೆಸುತ್ತಿರುವ ಹೋರಾಟಕ್ಕೆ ಜಯವಾಗಲಿ! ಎಡ ಮತ್ತು ಪ್ರಜಾಸತ್ತಾತ್ಮಕ ಶಕ್ತಿಗಳ ಹೋರಾಟಕ್ಕೆ ಜಯವಾಗಲಿ! ಎಂಬ ಘೋಷಣೆಗಳನ್ನು ನಗರದ ಪ್ರಮುಖ ಬೀದಿಗಳಲ್ಲಿ ಕೂಗುತ್ತಾ ಮೆರವಣಿಗೆ ನಡೆಸಲಾಯಿತು.

ಮೆರವಣಿಗೆಯ ನೇತೃತ್ವವನ್ನು ತುಮಕೂರು, ಕುಣಿಗಲ್, ಮತ್ತು ತಿಪಟೂರು ಶಾಖೆಯ ವಿದ್ಯಾರ್ಥಿ ಫೆಡರೇಷನ್ನಿನ ಕಾರ್ಯಕರ್ತರುಗಳಾದ ಆರ್. ರವೀಂದ್ರನಾಯಕ್, ಶರಣಪ್ಪ, ಗಂಗಾಧರ್, ಕೋದಂಡರಾಮು ಮತ್ತಿತರರು ವಹಿಸಿದ್ದರು. ○

ರೈತರಿಂದ ೧೫೦ ಎಕರೆ ಭೂಮಿ ಆಕ್ರಮಣ

ಕೋಲಾರ ಜಿಲ್ಲಾ ರೈತಸಂಘದ ಆದೇಶದಂತೆ ಚಿಂತಾಮಣಿ ತಾಲ್ಲೂಕು ಮುಂಗೇನಹಳ್ಳಿ ಹೋಬಳಿ ಕಡದಲಮ್ರಿ, ಕೋಡಿಗಲ್, ಬಟ್ಲಹಳ್ಳಿ ಪಂಚಾಯಿತಿಗೆ ಸೇರಿದ ಸುನ್ನಾಪಗುಟ್ಟ, ರಾಯಪ್ಪಲ್ಲಿ, ಬಿಲ್ಲಾಂಡಹಳ್ಳಿ, ಚೀಮಲಗುಟ್ಟ, ಬಟ್ಟಿಹಳ್ಳಿ ಮತ್ತಿತರ ಹಳ್ಳಿಗಳ ರೈತ, ಕಾರ್ಮಿಕರು ವ್ಯವಸಾಯ ಯೋಗ್ಯ ಅರಣ್ಯ ಭೂಮಿ ಹಾಗೂ ಬಂಜರು ಭೂಮಿಯನ್ನು ನೂರಾರು ನೇಗಿಲು ಕಟ್ಟಿ ಉತ್ತು ಹುರುಳಿ ಬಿತ್ತನೆ ಮಾಡಿರುತ್ತಾರೆ.

ಸರಕಾರ ಒಂದು ಕಡೆ ಹಸಿರುಕ್ರಾಂತಿಯ ಬಗ್ಗೆ ಹಾಗೂ ಉಳುವವನೇ ಹೊಲದೊಡೆಯನಾಗುತ್ತಾನೆಂದು ಹೇಳುತ್ತಿದೆ, ಮತ್ತೊಂದು ಕಡೆ ಕೃಷಿ ಕೂಲಿಗಾರರು ಮುವತ್ತು ವರ್ಷಗಳಿಂದ ಸರಕಾರಕ್ಕೆ ಅನೇಕ ಮನವಿಗಳನ್ನು ನೀಡಿದ್ದರೂ ಯಾವ ಪ್ರಯೋಜನವೂ ಆಗಿಲ್ಲ.

1972-73ರಲ್ಲಿ ನಡೆದ ಭೂಗ್ರಹಣ ಚಳುವಳಿಯಲ್ಲಿ ರೈತರು ವಶಪಡಿಸಿಕೊಂಡ ನೂರಾರು ಎಕರೆ ಜಮೀನಿನ ಫಸಲನ್ನು ರೈತರು ಇಂದಿಗೂ ಅನುಭವಿ

[ಕಡೆಯ ಪುಟ ನೋಡಿ]

ಆರ್ಥಿಕ ಸಮೀಕ್ಷೆ :

ಆರ್. ಚಂದ್ರ

ಅಡಿಗೆ ತೈಲ, ಸಕ್ಕರೆ ಕೃತಕ ಬೆಲೆ ಏರಿಕೆ

ಕಳೆದ ಆರು ತಿಂಗಳುಗಳಿಂದ ಹಣದುಬ್ಬರದ ವಿರುದ್ಧ ಕೈಕೊಂಡ ರಕ್ಷಣಾತ್ಮಕ ಕಾರ್ಯಕ್ರಮಗಳೆಲ್ಲವೂ ನಿಷ್ಪ್ರಯೋಜನಗೊಳ್ಳುತ್ತಿದ್ದು, ಪುನಃ ಹಣದುಬ್ಬರವು ಕೈಮೀರಿ ಹೋಗುತ್ತಿದೆ. ಸಾಕಷ್ಟು ವಿದೇಶಿ ವಿನಿಮಯ ಸಂಗ್ರಹ, ಆಹಾರಧಾನ್ಯಗಳ ದಾಸ್ತಾನು ಮತ್ತು ಅವಶ್ಯಕ ವಸ್ತುಗಳ ಸಾರ್ವಜನಿಕ ವಿತರಣಾ ವ್ಯವಸ್ಥೆ, ಇವುಗಳು ಹಣದುಬ್ಬರದ ವಿರುದ್ಧ ಖಚಿತ ಭರವಸೆಗಳೆಂದು ನಂಬಲಾಗಿತ್ತು. ಆದರೆ, ವ್ಯಾಪಾರಸ್ಥರ ಹಾಗೂ ದಳ್ಳಾಳಿಗಳ ಕೈವಾಡಗಳಿಂದ ಇವೆಲ್ಲಾ ಲೆಕ್ಕಾಚಾರಗಳು ತಲೆಕೆಳಗಾಗಿವೆ. ಬೆಲೆಗಳು ಕೃತಕವಾಗಿ ಏರಲಾರಂಭಿಸಿವೆ. ಅಡಿಗೆ ತೈಲ ಮತ್ತು ಸಕ್ಕರೆಯ ಬೆಲೆಗಳು ವಿಪರೀತ ಏರಿರುವುದೇ ಇದಕ್ಕೆ ಉತ್ತಮ ನಿದರ್ಶನವಾಗಿದೆ.

ಅಡಿಗೆತೈಲ :

ಭಾರತವು ಪ್ರಪಂಚದಲ್ಲಿಯೇ ಎಣ್ಣೆ ಬೀಜಗಳ ಅತಿದೊಡ್ಡ ಉತ್ಪಾದಕ ದೇಶವಾಗಿದೆ. ದೇಶದಲ್ಲಿ ಸುಮಾರು 16 ಮಿಲಿಯ ಹೆಕ್ಟೇರುಗಳಷ್ಟು ಭೂಮಿಯಲ್ಲಿ ರೂ. 2400 ಕೋಟಿ ಮೌಲ್ಯದ ಎಣ್ಣೆಬೀಜಗಳನ್ನು ಪ್ರತಿವರ್ಷವೂ ಬೆಳೆಸಲಾಗುತ್ತಿದೆ. ಈ ವ್ಯವಸಾಯದಲ್ಲಿ ಸುಮಾರು 14 ಮಿಲಿಯ ಜನರು ಉದ್ಯೋಗದಲ್ಲಿದ್ದಾರೆ. ಭಾರತದ ಅಡಿಗೆ ತೈಲೋತ್ಪಾದನೆಯು ಈ ವರ್ಷಕ್ಕೆ ಸುಮಾರು 28 ಲಕ್ಷ ಟನ್ನುಗಳಿಗೂ ಮೀರಿದೆ. ಅಡಿಗೆತೈಲದ ಒಟ್ಟು ಆಂತರಿಕ ಬೇಡಿಕೆಯು ಈ ವರ್ಷ 36 ಲಕ್ಷ ಟನ್ನುಗಳಾಗಿದ್ದು, 8 ಲಕ್ಷ ಟನ್ನುಗಳಷ್ಟು ಆಮದುಮಾಡಿಕೊಳ್ಳಲಾಗಿದೆ. ಕೆಲವೇ ವರ್ಷಗಳ ಹಿಂದೆ ನಮ್ಮ ದೇಶವು ಎಣ್ಣೆಬೀಜಗಳನ್ನೂ, ಅಡಿಗೆ ತೈಲವನ್ನೂ ರಫ್ತುಮಾಡುತ್ತಿತ್ತು. ಆದರೆ, ಇಂದು ಆಂತರಿಕ ಬೇಡಿಕೆಯು ಹೆಚ್ಚಿ ಸಾಕಷ್ಟು ಪ್ರಮಾಣದಲ್ಲಿ ಈ ಅವಶ್ಯಕ ವಸ್ತುಗಳನ್ನು ಆಮದು ಮಾಡಿಕೊಳ್ಳಲಾಗುತ್ತಿದೆ. ಆಂತರಿಕ ಬೇಡಿಕೆಗೂ ಉತ್ಪಾದನೆಗೂ ಹೆಚ್ಚು ಅಂತರ ಇರದಿರುವಾಗ, ಕೊರತೆಯನ್ನು ಹೋಗಲಾಡಿಸಲು ಸಾಕಷ್ಟು ಆಮದು ಮಾಡಿಕೊಳ್ಳುತ್ತಿರುವಾಗ, ಅಡಿಗೆತೈಲಗಳ ಬೆಲೆಗಳು ಏರುವುದಾದರೂ ಯಾಕೆ ? ಮುಖ್ಯವಾಗಿ, ಅಡಿಗೆ ತೈಲಗಳಲ್ಲಿ ಶೇ. 90 ರಷ್ಟು ಪಾಲು ಪಡೆದಿರುವ ನೆಲಗಡಲೆ ಎಣ್ಣೆಯ ಬೆಲೆಯು ಕಳೆದ ಮಾರ್ಚ್ 79ರಿಂದ ಆಗಸ್ಟ್ 79ರ ವರೆಗಿನ ಐದು ತಿಂಗಳ ಅವಧಿಯಲ್ಲಿ ಒಂದು ಟನ್ನಿಗೆ ರೂ. 7100 ರಿಂದ ರೂ. 11180 ಕ್ಕೇರಿದುದು ಯಾಕೆ ?

ಕಳೆದ ಡಿಸೆಂಬರ್ 1978ರಲ್ಲಿ ಜನತಾ ಸರಕಾರ ಸುಮಾರು ಹತ್ತು ಲಕ್ಷ ಟನ್ ಅಡಿಗೆತೈಲವನ್ನು ಸ್ಟೇಟ್ ಟ್ರೇಡಿಂಗ್ ಕಾರ್ಪೊರೇಶನ್ (STC) ಮೂಲಕ ಆಮದು ಮಾಡಿಕೊಳ್ಳುವುದೆಂದು ನಿರ್ಧರಿಸಿತ್ತು. STC ಯಂತಹ ಸರಕಾರಿ ಸಂಸ್ಥೆಯು ಆಮದು ಮಾಡುತ್ತಿರುವುದೇ ಅಡಿಗೆತೈಲಗಳ ಬೆಲೆಏರಲು ಕಾರಣ ಎಂದು ಖಾಸಗೀ ವ್ಯಾಪಾರಸ್ಥರು ಆಪಾದಿಸುತ್ತಾರೆ. ಆದರೆ ಈ ಆಪಾದನೆ ಅಪ್ರಮಾಣಿಕವಾದುದು. 1977 ರಲ್ಲಿ ಅಡಿಗೆತೈಲಗಳ ಅಭಾವವನ್ನು ನೀಗಿಸಲು ರೂ. 550 ಕೋಟಿ ಮೌಲ್ಯದ ಅಡಿಗೆ ತೈಲಗಳನ್ನು ಓಪನ್ ಜನರಲ್ ಲ್ಯಾಸನ್ಸ್ (OGL) ಮೂಲಕ ಆಮದು ಮಾಡಲು ಖಾಸಗೀ ವ್ಯಾಪಾರಸ್ಥರಿಗೆ ಅನುಮತಿ ನೀಡಲಾಗಿತ್ತು. ಪರಿಣಾಮ ? ಲ್ಯಾಸನ್ಸುದಾರರು ಅಡಿಗೆತೈಲಗಳ ಬೆಲೆಗಳು ಏರಲಿ ಎಂದೇ ಉದ್ದೇಶಪೂರ್ವಕವಾಗಿ ಸಾಕಷ್ಟು ಆಮದುಮಾಡಲೇ ಇಲ್ಲ. ಬದಲು, ಲ್ಯಾಸನ್ಸ್‌ಗಳಲ್ಲಿಯೇ ವ್ಯಾಪಾರ ಮಾಡತೊಡಗಿದರು! ಆಮದು ಮೌಲ್ಯದ ಶೇ. 80 ರಷ್ಟು ಲ್ಯಾಸನ್ಸ್‌ಗಳನ್ನು ಕೆಲವೇ ಖಾಸಗೀ ವ್ಯಾಪಾರಸ್ಥರು ಕಬಳಿಸಿಕೊಂಡಿದ್ದರು. ಆಮದು ಮಾಡಿದುದರಲ್ಲಿಯೂ ಸ್ವಲ್ಪ ನೆರೆಯ ಗಲ್ಫ್‌ದೇಶಗಳಲ್ಲಿ ಬೆಲೆ ಹೆಚ್ಚಿರುವುದರಿಂದ ಅಲ್ಲಿಗೇ ಸಾಗಿಸಿ ಲಾಭಗಿಟ್ಟಿಸಿಕೊಂಡರು ನಮ್ಮ ರಾಷ್ಟ್ರಭಕ್ತ ಖಾಸಗೀ ವ್ಯಾಪಾರಸ್ಥರು! ಒಟ್ಟು ರೂ. 200 ಕೋಟಿಗಿಂತ ಹೆಚ್ಚು ಆ ವರುಷ ಆಮದುಕೊಳ್ಳಲಿಲ್ಲ. ಆಂತರಿಕ ಮಾರುಕಟ್ಟೆಯಲ್ಲಿ ಕೃತಕ ಅಭಾವಉಂಟಾಗಿ ಬೆಲೆಗಳು ವಿಪರೀತ ಏರಿದವು. ಜೀವನಾವಶ್ಯಕ ವಸ್ತುಗಳನ್ನು ಸರಬರಾಜು ಮಾಡುವಂತಹ ವಿಷಯಗಳಲ್ಲಿ ಖಾಸಗೀ ವ್ಯಾಪಾರಸ್ಥರ ಮೇಲೆ ಭರವಸೆ ಇಡುವುದು ಅಪಾಯ ಎಂದು ಇದರಿಂದ ಪಾಠಕಲಿತಂತಾಯಿತು.

1979ರಲ್ಲಿ STC ಮೂಲಕ ಅಡಿಗೆತೈಲಗಳನ್ನೂ, ಎಣ್ಣೆಬೀಜಗಳನ್ನೂ ಆಮದು ಮಾಡಿಕೊಳ್ಳುವುದೆಂದು ನಿರ್ಧರಿಸಿದಾಗಲೂ ಬೆಲೆಗಳು ಇಳಿಯಲೇ ಇಲ್ಲ. ಕಾರಣ ? ಜೀವನಾವಶ್ಯಕ ವಸ್ತುಗಳ ಸರಬರಾಜಿನಲ್ಲಿ ನೌಕರಶಾಹಿಯ ಹಸ್ತಕ್ಷೇಪವೂ ಸೂಕ್ತ ಪರಿಹಾರವಲ್ಲ STC ಅಡಿಗೆತೈಲಗಳನ್ನೂ ಎಣ್ಣೆಬೀಜಗಳನ್ನೂ ಆಮದು ಮಾತ್ರ ಮಾಡಬಲ್ಲದು. ಆದರೆ, ಮುಂದೆ ಅವುಗಳನ್ನು ದೇಶದ ಮೂಲೆಮೂಲೆಯಲ್ಲಿರುವ ಗ್ರಾಹಕರಿಗೆ ಚಿಲ್ಲರೆಯಾಗಿ ವಿತರಣೆಮಾಡಲಾರದು. ಸಗಟು ವ್ಯಾಪಾರ, ಚಿಲ್ಲರೆ ವ್ಯಾಪಾರಗಳನ್ನು ಪುನಃ ಖಾಸಗೀ ವ್ಯಾಪಾರಸ್ಥರು, ದಳ್ಳಾಳಿಗಳು ಮಾಡಬೇಕಾಗುವುದು. STCಗೆ ಸಾರ್ವಜನಿಕ ಚಿಲ್ಲರೆ ವಿತರಣಾ ವ್ಯವಸ್ಥೆ ಇಲ್ಲ. ಅಡಿಗೆ ತೈಲವು ಸಾರ್ವಜನಿಕ ವಿತರಣಾ ವ್ಯವಸ್ಥೆಯಲ್ಲಿ ಬರಲೇ ಇಲ್ಲ! ಸಾರ್ವಜನಿಕ ವಿತರಣಾ ವ್ಯವಸ್ಥೆಯೂ, ಇಷ್ಟು ಸಾವಿರ ಜನರಿಗೆ ಇಷ್ಟು ನ್ಯಾಯಬೆಲೆಯ ಅಂಗಡಿಗಳು ಎಂದೆಲ್ಲಾ ಸುಮ್ಮನೆ ಮಂತ್ರಿಗಳ ಭಾಷಣದಲ್ಲೂ, ಅಧಿಕಾರಿಗಳ ಹೇಳಿಕೆಗಳನ್ನು ಬರೆದ ಕಾಗದದಲ್ಲೂ ಇದ್ದುವೇ ಹೊರತು ಕಾರ್ಯರೂಪದಲ್ಲಿರಲೇ ಇಲ್ಲ. STCಆಮದುಮಾಡಿಮುಂಬಯಿಯಲ್ಲಿ ಖಾಸಗೀ ವ್ಯಾಪಾರಸ್ಥರಿಗೆ ಮತ್ತು ಅಡಿಗೆ ತೈಲೋತ್ಪಾದಕ ಕಂಪೆನಿಗಳಿಗೆ ಹರಾಜುಗಳ ಮೂಲಕ ಮಾರಾಟ ಮಾಡುತ್ತಿತ್ತು. STC ಮಾರುವ ಬೆಲೆಯು ಮಾರುಕಟ್ಟೆಯ ಬೆಲೆಗಿಂತ ಬಹಳ ಕಡಿಮೆಯೇ ಆಗಿತ್ತು. ಪರಿಣಾಮವಾಗಿ ಅಡಿಗೆ ತೈಲಗಳ ಚಿಲ್ಲರೆ ವ್ಯಾಪಾರದ ಬೆಲೆಗಳು ಆದಷ್ಟು ಕಡಿಮೆ ಆಗಲಿ ಎನ್ನುವುದೇ ಉದ್ದೇಶ. ಆದರೆ ಬೆಲೆಗಳುಕಡಿಮೆಯಾಗಲೇ ಇಲ್ಲ ವ್ಯಾಪಾರಿಗಳ, ದಾಸ್ತಾನುಗಾರರ, ದಳ್ಳಾಳಿಗಳ ಲಾಭ ಹೆಚ್ಚುತ್ತಲೇ ಹೋಯಿತು. ಇವರು STC ಯಿಂದ ಅಗ್ಗದಲ್ಲಿ ಪಡೆದ ಅಡಿಗೆತೈಲಗಳನ್ನು ನಿಯಂತ್ರಿತವಾಗಿ ಚಿಲ್ಲರೆ ಮಾರುಕಟ್ಟೆಗಳಿಗೆ ಬಿಡುಗಡೆಮಾಡಿ, ಕೊರತೆ ಪರಿಸ್ಥಿತಿಯನ್ನು ಉದ್ದೇಶಪೂರ್ವಕವಾಗಿ ಉಂಟುಮಾಡಿ, ಮದುವೆ ಹಬ್ಬ ಮುಂತಾದ ತುರ್ತಿನ ಪರಿಸ್ಥಿತಿಗಳಲ್ಲಿಯೇ ಬೆಲೆಏರಿಕೆಯನ್ನು ಉಳಿಸಿಕೊಂಡು ಬೆಳೆಸಿಕೊಂಡು ಬಂದರು!

1977 ರಲ್ಲಿ ಲ್ಯಾಸನ್ಸ್‌ದಾರರು ಉದ್ದೇಶಪೂರ್ವಕವಾಗಿ ಸಾಕಷ್ಟು ಆಮದು ಮಾಡದಿರುವುದನ್ನು ಆಕ್ಷೇಪಿಸಿ ಪಾರ್ಲಿಮೆಂಟಿನಲ್ಲಿ ಬಿರುಸಿನ ಚರ್ಚೆ ನಡೆಯಿತು. ಖಾಸಗೀ ವ್ಯಾಪಾರಸ್ಥರನ್ನೂ, ದಳ್ಳಾಳಿಗಳನ್ನೂ ಜನತಾಸರಕಾರವು ಬೆಂಬಲಿಸುತ್ತಾ, ತಾನು ಅವರ ಕುರಿತು ಸಿ. ಬಿ. ಐ. (CBI) ವಿಚಾರಣೆ ನಡೆಸಿರುವುದಾಗಿಯೂ, ಲ್ಯಾಸನ್ಸ್‌ದಾರರು ಅಡಿಗೆ ತೈಲಗಳನ್ನು ಸಾಕಷ್ಟು ಆಮದು ಮಾಡದಿರುವುದು ಅಪರಾಧವಲ್ಲ ಎಂದು ಸಿ. ಬಿ. ಐ ತೀರ್ಮಾನಿಸಿದೆ ಎಂದೂ ಪಾರ್ಲಿಮೆಂಟಿಗೆ ತಿಳಿಸಿತು. ದೇಶದಲ್ಲಿ ಜೀವನಾವಶ್ಯಕ ವಸ್ತುಒಂದರ ತೀವ್ರಕೊರತೆಯಿಂದಾಗಿ ಬೆಲೆಗಳು ಗಗನಕ್ಕೇರುತ್ತಿದ್ದು ಜನರು ಹಾಹಾಕಾರ ಮಾಡುತ್ತಿರುವಾಗ, ಆಂತರಿಕ ಸರಬರಾಜನ್ನು ಹೆಚ್ಚಿಸಿ ಬೆಲೆ ಇಳಿಸಲು ಸಾಕಷ್ಟು ಆಮದುಮಾಡಲು ವ್ಯಾಪಾರಸ್ಥರಿಗೆ ಮುಕ್ತ ಲೈಸನ್ಸ್ ನೀಡಿರುವಾಗ, ಬೇಕಾದಷ್ಟು ವಿದೇಶಿ ವಿನಿಮಯವನ್ನೂ ಮೀಸಲಿರಿಸಿರುವಾಗ, ವ್ಯಾಪಾರಸ್ಥರು ಸರಕಾರದ ಬೆಲೆನಿಯಂತ್ರಣವನ್ನು ವಿಫಲಗೊಳಿಸುವ ಮತ್ತು ಜನರ ಸಂಕಷ್ಟಗಳನ್ನು ತಮ್ಮ ಲಾಭಕ್ಕೆ ದುರುಪಯೋಗಿಸುವ ಉದ್ದೇಶದಿಂದ ಸಾಕಷ್ಟು ಅಡಿಗೆತೈಲ ಆಮದು ಮಾಡಿರದಿದ್ದುದು ಅಪರಾಧವಲ್ಲವಾದರೆ, ಈ ದೇಶದಲ್ಲಿ ಇನ್ನಾವುದು ಅಪರಾಧ ? ಕಾರ್ಮಿಕರು ಬೆಲೆ ಏರಿಕೆಯ ವಿರುದ್ಧ, ತುಟ್ಟಿಭತ್ಯೆಗಾಗಿ ವೇತನ ಹೆಚ್ಚಳಕ್ಕಾಗಿ, ಬೋನಸ್‌ಗಾಗಿ ಹೋರಾಟ ಮಾಡುವುದೊಂದೇ ನಮ್ಮ ದೇಶದ ಬಂಡವಾಳಶಾಹಿ ಸಮಾಜದಲ್ಲಿ ಅಪರಾಧ !

ಸಕ್ಕರೆ :

ಅಡಿಗೆತೈಲದಂತೆಯೇ ಸಕ್ಕರೆಯಲ್ಲಿಯೂ ದೊರಕುವ ಸರಬರಾಜಿನ ಬಹುಪಾಲು ಸಗಟುವ್ಯಾಪಾರಸ್ಥರು, ದೊಡ್ಡ ದಳ್ಳಾಳಿಗಳು ಚಿಲ್ಲರೆ ವಿತರಣೆಗೆ ಸಕಾಲದಲ್ಲಿ ಸಾಕಷ್ಟು ಪ್ರಮಾಣದಲ್ಲಿ ಬಿಡುಗಡೆ ಮಾಡದೆ ತಡೆಹಿಡಿಯುತ್ತಿರುವುದೇ ಬೆಲೆಏರಿಕೆಗೆ ಮುಖ್ಯ ಕಾರಣ. ಸಕ್ಕರೆಯ ಉತ್ಪಾದನೆ, ವಿತರಣೆ, ಬೆಲೆಗಳಲ್ಲಿ ಸರಕಾರದ ಧೋರಣೆಗಳು ಮೊದಲಿನಿಂದಲೂ ಅನಿಶ್ಚಿತವಾಗಿಯೇ ಇದ್ದವು. ಈ ಕೈಗಾರಿಕೆಯಲ್ಲಿ ದುಡಿಯುವ 2.5 ಲಕ್ಷ ಕಾರ್ಮಿಕರೂ, ಲಕ್ಷಾಂತರ ಕಬ್ಬುಬೆಳೆಗಾರರೂ, ದೇಶಾದ್ಯಂತ ಹರಡಿರುವ ಚಿಲ್ಲರೆ ವ್ಯಾಪಾರಸ್ಥರೂ, ಗ್ರಾಹಕ ಜನಕೋಟಿಯೂ ಅಸಹನೀಯ ಸಂಕಷ್ಟಗಳಿಗೆ ಒಳಗಾಗುತ್ತಿದ್ದಾರೆ. ಸಕ್ಕರೆ ಕೈಗಾರಿಕೆಯು ದೇಶದ ರಾಜಕೀಯದಂತೆಯೇ ಅಸ್ಥಿರವಾಗಿದೆ. ಒಮ್ಮೆ ಸರಕಾರದ ಸಂಪೂರ್ಣ ನಿಯಂತ್ರಣವಾದರೆ, ಇನ್ನೊಮ್ಮೆ ಅರೆ-ನಿಯಂತ್ರಣ, ಮತ್ತೊಮ್ಮೆ ಯಾವ ನಿಯಂತ್ರಣವೂ ಇಲ್ಲದಿರುವುದು. 1978 ರಲ್ಲಿ ಸಕ್ಕರೆ ಉತ್ಪಾದನೆಯು ಅತ್ಯಧಿಕವಾಗಿದ್ದು, 64 ಲಕ್ಷ ಟನ್ನುಗಳಿಗೂ ಮೀರಿತು. ಬೆಲೆಗಳು ಒಮ್ಮೆಲೇ ಕುಸಿಯಲಾರಂಭಿಸಿದವು. ಕಬ್ಬುಬೆಳೆಯನ್ನು ಕೇಳುವವರಿಲ್ಲದೆ ಭಾರೀ ಪ್ರಮಾಣದಲ್ಲಿ ಅದು ಒಣಗಿ ಉರಿಸಲು ಉಪಯೋಗಿಸಲಾಯಿತು! ಲಕ್ಷಾಂತರ ಕಬ್ಬುಬೆಳೆಗಾರರಿಗೆ ನ್ಯಾಯಬೆಲೆ ಸಿಗದೆಹೋಯಿತು. ಅವರು ಸೋತು ಹತಾಶರಾದರು. ಸರಕಾರವೂ ಅವರ ಸಹಾಯಕ್ಕೆ ಬರಲಿಲ್ಲ. ಅಂತರಾಷ್ಟ್ರೀಯ ಮಟ್ಟದಲ್ಲಿಯೂ ಸಕ್ಕರೆ ಉತ್ಪಾದನೆ ಹೆಚ್ಚಿ ಬೆಲೆಗಳು ಕುಸಿದವು. ಆದರೆ ನಮ್ಮ ದೇಶದ ಗುತ್ತೇದಾರಿ ಸಕ್ಕರೆ ಕಾರ್ಖಾನೆಗಳು ಸಾಕಷ್ಟು ಲಾಭಗಳಿಸುತ್ತಲೇ ಇದ್ದವು. ಉಳಿದ ಸಣ್ಣಪುಟ್ಟ ಕಾರ್ಖಾನೆಗಳು ದಿವಾಳಿಯಾದವು. ಅಷ್ಟರಲ್ಲಿ ಜನತಾ ಸರಕಾರ ಸಕ್ಕರೆಯ ಮೇಲಿನ ನಿಯಂತ್ರಣವನ್ನು ಸಂಪೂರ್ಣ ತೆಗೆದುಹಾಕಿತು. ಸಕ್ಕರೆಯ ಬೆಲೆಯು ಕಿಲೋ ಒಂದಕ್ಕೆ ರೂ. 2.70 ಕ್ಕಿಂತ ಹೆಚ್ಚಾಗಲು ಬಿಡಲಾಗದು ಎಂದು ಸರಕಾರ ಆಶ್ವಾಸನೆಕೊಟ್ಟಿತು. ಆದರೆ ನಡೆದದ್ದೇನು ?

ಸಕ್ಕರೆ ಬೆಲೆ ಇಳಿತದಿಂದಾಗಿ 1979 ರಲ್ಲಿ ಸಕ್ಕರೆ ಉತ್ಪಾದನೆಯು 58ಲಕ್ಷ ಟನ್ನುಗಳಿಗಿಳಿಯಿತು. ಕಬ್ಬುಬೆಳೆಗೆ ಬೆಲೆ ಇಲ್ಲದಿರುವುದರಿಂದ ಕಬ್ಬಿನ ಉತ್ಪಾದನೆ ಕಡಿಮೆಯಾದುದರಿಂದ, ಸಕ್ಕರೆಯ ಉತ್ಪಾದನೆಯೂ ಕಡಿಮೆ ಆಯಿತು. ಮುಂದಿನ ವರ್ಷವೂ ಕಬ್ಬಿನ ಬೆಳೆ ಕಡಿಮೆಯಾಗಿ ಸಕ್ಕರೆಯ ಉತ್ಪಾದನೆಯು ಕುಸಿದೀತೆಂದು ನಿರೀಕ್ಷಿಸಲಾಯಿತು. ಪರಿಣಾಮವಾಗಿ, ಸಕ್ಕರೆಯ ಮೇಲಿನ ನಿಯಂತ್ರಣವನ್ನು ಸಂಪೂರ್ಣವಾಗಿ ತೆಗೆದುಹಾಕಿದ ಕೆಲವೇ ತಿಂಗಳುಗಳ ನಂತರ ಬೆಲೆಗಳು ಏರಲಾರಂಭಿಸಿದವು. ಕಾರಣ ? ಸಕ್ಕರೆ ಕಾರ್ಖಾನೆಯ ದೊಡ್ಡ ಬಂಡವಾಳಗಾರರು, ಅವರ ಏಜೆಂಟರಾದ ಸಗಟು ವ್ಯಾಪಾರಸ್ಥರು, ದಳ್ಳಾಳಿಗಳು ಸಕ್ಕರೆಯನ್ನು ಸಕಾಲದಲ್ಲಿ ಸಾಕಷ್ಟು ಪ್ರಮಾಣದಲ್ಲಿ ಮಾರುಕಟ್ಟೆಗೆ ಚಿಲ್ಲರೆ ವಿತರಣೆಗಾಗಿ ಬಿಡುಗಡೆಮಾಡದೆ ಉದ್ದೇಶಪೂರ್ವಕವಾಗಿ ತಡೆಹಿಡಿಯಲಾರಂಭಿಸಿದರು. ಸರಕಾರದ ನಿಯಂತ್ರಣ ಹೋದರೂ, ಬಂಡವಾಳಗಾರರು ಮತ್ತು ವ್ಯಾಪಾರಸ್ಥರು ತಮ್ಮ ಲಾಭಕ್ಕಾಗಿ ಸಕ್ಕರೆ ಸರಬರಾಜಿನ ಮೇಲೆ ತಮ್ಮದೇ ನಿಯಂತ್ರಣವನ್ನು ಹೇರಿ ಕೃತಕವಾಗಿ ಬೆಲೆಗಳನ್ನೇರಿಸಿ ಭಾರಿ ಲಾಭ ಗಿಟ್ಟಿಸಿಕೊಂಡರು. ಅವರು ತಮ್ಮ ಅಕ್ರಮ ಒಕ್ಕೂಟ (cartel) ರಚನೆಯಿಂದ ಸಕ್ಕರೆ ಸರಬರಾಜನ್ನು ಯಶಸ್ವಿಯಾಗಿ ನಿಯಂತ್ರಿಸಿದರು. ಪ್ರತಿ ತಿಂಗಳಿಗೆ, ಪ್ರತಿವಾರಕ್ಕೆ ಇಷ್ಟೇ ಪ್ರಮಾಣದಲ್ಲಿ ಸಕ್ಕರೆಯನ್ನು ಮಾರುಕಟ್ಟೆಗೆ ಬಿಡುಗಡೆ ಮಾಡಬೇಕೆಂದೂ, ದಾಸ್ತಾನುಗಾರರಲ್ಲಿ ನಿಯಮಿತ ಪ್ರಮಾಣಕ್ಕಿಂತ ಹೆಚ್ಚು ಸಕ್ಕರೆ ದಾಸ್ತಾನು ಇರಕೂಡದೆಂದೂ, ಸರಕಾರ ಆದೇಶಗಳನ್ನಿತ್ತರೂ, ಅವುಗಳನ್ನು ಅಲಕ್ಷಿಸಿದರು. ಜನತಾಸರಕಾರವು ಈ ವರ್ಷದ ಮಧ್ಯದಲ್ಲಿ ಬಿದ್ದು ಹೋಗಿ ಹೊಸ ಸರಕಾರವೂ ಕೇಂದ್ರದಲ್ಲಿ ಅಧಿಕಾರಕ್ಕೆ ಬಂದಾಗ ಇದ್ದ ಸಕ್ಕರೆಯ ಗರಿಷ್ಠ ಬೆಲೆ ಕಿಲೋ ಒಂದಕ್ಕೆ ರೂ.2-90 ನ್ನೇ ನ್ಯಾಯಯುತ ಬೆಲೆ ಎಂದು ಹೊಸ ಸರಕಾರ ಸಾರಿತು !

ಹೊಸ ಸರಕಾರದ ಇತ್ತೀಚೆಗಿನ ಹೊಸ ಸಕ್ಕರೆ ನೀತಿಯು ಗ್ರಾಹಕರಿಗೆ ಇನ್ನಷ್ಟು ಅನಾನುಕೂಲವಾಯಿತು. ಸಕ್ಕರೆ ಕೈಗಾರಿಕೆಯು ಕಳೆದ ವರುಷದಿಂದ ಬೆಲೆ ಇಳಿತದಿಂದಾಗಿ ಭಾರೀ ನಷ್ಟ ಹೊಂದಿದೆ ಎಂದು ಬಂಡವಾಳಗಾರರು ನೆವ ಒಡ್ಡಿ ಸರಕಾರದಿಂದ ಸಾಕಷ್ಟು ರಿಯಾಯತಿ ಪಡೆಯಲು ಒತ್ತಾಯಿಸುತ್ತಲೇ ಇದ್ದರು. ಸಕ್ಕರೆ ಕಾರ್ಖಾನೆಗಳಿಗೆ ಹೊಸ ಸಕ್ಕರೆ ನೀತಿಯಂತೆ ಎಕ್ಸೈಸ್ ಡ್ಯೂಟಿಯಲ್ಲಿ ರಿಯಾಯತಿ ನೀಡಲಾಯಿತು. ಸುಲಭದಲ್ಲಿ ಸಾಲ ದೊರಕುವಂತಾಯಿತು. ಜನವರಿ 15, 1980ರಿಂದ ಕಾರಖಾನೆಯಿಂದ ಹೊರಬರುವ ಸಕ್ಕರೆಗೆ ಕಿಲೋ ಒಂದಕ್ಕೆ ರೂ. 3-50 ರಷ್ಟು ಬೆಲೆ ನಿರ್ಧರಿಸಲಾಯಿತು. ಸದ್ಯದ ದಾಸ್ತಾನು ಸಕ್ಕರೆಯನ್ನು ಈ ಸದ್ಯದ ಬೆಲೆ ಕಿಲೋ ಒಂದಕ್ಕೆ ರೂ. 3.60ಕ್ಕೆ ಮಾರಬೇಕೆಂದು ಸರಕಾರ ಆದೇಶಿಸಿತು. ಕೂಡಲೇ ಮುಂಬರುವ ಸಕ್ಕರೆಯ ಏರಿಕೆಯ ಬೆಲೆಯ ನಿರೀಕ್ಷೆಯಲ್ಲಿ ಈಗಿರುವ ಸಕ್ಕರೆಯು ಮಾರುಕಟ್ಟೆಯಿಂದ ಕಣ್ಮರೆಯಾಗಲಾರಂಭಿಸಿ, ಸಕ್ಕರೆಯ ಬೆಲೆಗಳು ಮತ್ತಷ್ಟು ಏರಿದವು. ಅಕ್ರಮ ದಾಸ್ತಾನು, ಕಳ್ಳಸಂತೆ ವ್ಯಾಪಾರ

[7ನೇ ಪುಟ ನೋಡಿ]

ಇಂದಿರಾ ಆಡಳಿತದಲ್ಲಿ ಮುಸ್ಲಿಮರಿಗೆ ರಕ್ಷಣೆಯಿತ್ತೆ ?

ಇಂದಿರಾಗಾಂಧಿ, ತಾನು ಮುಂಬರುವ ಚುನಾವಣೆಯಲ್ಲಿ ಆಯ್ಕೆಯಾಗಿ ಅಧಿಕಾರಕ್ಕೆ ಬಂದರೆ ಮಾತ್ರ ಈ ದೇಶದಲ್ಲಿ ಮುಸ್ಲಿಮರಿಗೂ ಅಲ್ಪಸಂಖ್ಯಾತರಿಗೂ ರಕ್ಷಣೆ ಸಿಗುವುದು ಸಾಧ್ಯವೆಂದು ಹೇಳುತ್ತಿದ್ದಾರೆ. ಇಂದಿರಾ ಆಡಳಿತಾವಧಿಯಲ್ಲಿ ಭಿವಂಡಿ ಮತ್ತು ಜಲಗಾಂವ್‌ನ ಮುಸ್ಲಿಮರಿಗೆ ಎಂತಹ ರಕ್ಷಣೆ ದೊರೆತ್ತಿತ್ತು ಎನ್ನುವುದರ ಒಂದು ವಿಶಿಷ್ಟ ಮಾದರಿ ಇಲ್ಲಿದೆ. ಕೋಮುವಾರು ಗಲಭೆಗಳಿಗೆ ಆರೆಸ್ಸೆಸ್ ಅಥವಾ ಜನಸಂಘಗಳು ಕಾರಣವೆಂದು ಈವರೆಗೂ ಯಾವುದೇ ವಿಚಾರಣಾ ಆಯೋಗ ತೀರ್ಪು ನೀಡಿಲ್ಲವೆಂದು ಆರೆಸ್ಸೆಸ್ ಹೇಳಿಕೊಳ್ಳುತ್ತಿದೆ ಮತ್ತು ಅದರ ಹಿತೈಷಿಗಳೂ ಆರೆಸ್ಸೆಸ್‌ನ ಸಾಚಾತನದ ಬಗ್ಗೆ ಪ್ರಮಾಣಪತ್ರ ನೀಡುತ್ತಿದ್ದಾರೆ. ಈ ಸಂಬಂಧ ತಲಚೇರಿ ಗಲಭೆಗಳ ಕುರಿತು ವಿಚಾರಣಾ ಆಯೋಗವೊಂದು ನೀಡಿದ್ದ ವರದಿಯ ಕೆಲವು ಭಾಗಗಳನ್ನು ಈ ಹಿಂದೆಯೇ ಪ್ರಕಟಿಸಿದ್ದೇವೆ. ಆರೆಸ್ಸೆಸ್-ಜನಸಂಘಗಳ ವಾದದ ಪೊಳ್ಳುತನವನ್ನು ಮತ್ತೊಮ್ಮೆ ಎತ್ತಿತೋರಿಸುವ ಅಂತಹದೇ ಇನ್ನೊಂದು ಗಲಭೆಯ ಕುರಿತು ನೀಡಲಾದ ವರದಿಯ ಕೆಲವು ಭಾಗಗಳನ್ನು ಇಲ್ಲಿ ಪ್ರಕಟಿಸಲಾಗಿದೆ.

ಎಲ್. ಕೆ. ಓಕ್

ಇಂದಿರಾಗಾಂಧಿ ತನ್ನ ಚುನಾವಣಾ ಪ್ರಚಾರಗಳಲ್ಲಿ ಈ ದೇಶದ ಅಲ್ಪಸಂಖ್ಯಾತರು ಅದರಲ್ಲೂ ಮುಸ್ಲಿಮರು ಜನತಾಪಕ್ಷದ ಆಡಳಿತಾವಧಿಯಲ್ಲಿ ಅನುಭವಿಸಿದ ಸಂಕಷ್ಟಗಳ ಕುರಿತು ಧಾರಾಕಾರವಾಗಿ ಕಣ್ಣೀರು ಸುರಿಸಿ, ತಾನು ಗೆದ್ದು ಅಧಿಕಾರಕ್ಕೆ ಬಂದರೆ ಮಾತ್ರ ಅಲ್ಪಸಂಖ್ಯಾತರಿಗೆ ರಕ್ಷಣೆ, ನೆಮ್ಮದಿ ಸಿಗುವುದೆಂದೂ ಆಶ್ವಾಸನೆ ನೀಡುತ್ತಿದ್ದಾರೆ. ಇಂದಿರಾಗಾಂಧಿ ತಾನು ಅಧಿಕಾರಕ್ಕೆ ಬರಲು ನಡೆಸುತ್ತಿರುವಪ್ರಯತ್ನಗಳಲ್ಲಿಇದೇನೂ ಮೊದಲನೆಯದಲ್ಲ. ಅದೃಷ್ಟವಶಾತ್ ಇದು ನಮ್ಮ ಮುಸ್ಲಿಂ ಬಾಂಧವರಿಗೆ ಚೆನ್ನಾಗಿ ಗೊತ್ತು. ಇಂದಿರಾಗಾಂಧಿಯ ದಬ್ಬಾಳಿಕೆಗೆ ರೋಸಿದ ಜನ ಆಕೆಯನ್ನು 1977ರ ಚುನಾವಣೆಯಲ್ಲಿ ಸೋಲಿಸುವವರೆಗೆ ಅಂದರೆ ಸುಮಾರು ಹನ್ನೊಂದು ವರ್ಷಗಳ ಕಾಲ ಇಂದಿರಾಗಾಂಧಿ ಈ ದೇಶದ ಅನಭಿಷಿಕ್ತ ಸಾಮ್ರಾಜ್ಞಿಯಾಗಿದ್ದರು; ಮತ್ತು ಈ ಅವಧಿ ನಮ್ಮ ದೇಶದ ಮುಸ್ಲಿಂ ಅಲ್ಪಸಂಖ್ಯಾತರು ಅನುಭವಿಸಿದ ತೀರಾ ಅವಮಾನಕರ ಯಾತನೆಗಳ ನೆನಪುಗಳಿಂದ ತುಂಬಿ ಹೋಗಿದೆ. ಈ ಅನುಭವಗಳ ಒಂದು ಪುಟ್ಟ ಭಾಗವನ್ನು ಮಾತ್ರ ಇಲ್ಲಿ ವಿವರಿಸಲಾಗಿದೆ. ಇಂದಿರಾಗಾಂಧಿಯ ನಿಜವಾದ ಬಣ್ಣವನ್ನು ಬಯಲು ಮಾಡಲು ಇಷ್ಟೇ ಸಾಕು. ವಿಷಮ ಪರಿಸ್ಥಿತಿಯ ಕಾಲದಲ್ಲಿ ಇಂದಿರಾಗಾಂಧಿ ಜಾರಿಗೊಳಿಸಿದ್ದ ಪತ್ರಿಕಾ ಸೆನ್ಸಾರ್‌ಶಿಪ್‌ನಿಂದಾಗಿ ಇಲ್ಲಿ ಕಾಣಿಸಿದ ವರದಿ ಪ್ರಕಟಗೊಂಡಾಗ ಅದರ ಬಗ್ಗೆ ತಿಳಿದುಕೊಂಡ ಮಂದಿ ಬಹಳ ಕಡಿಮೆ.

ಈ ವರದಿ ಪಶ್ಚಿಮ ಮಹಾರಾಷ್ಟ್ರದ ಭಿವಂಡಿ, ಜಲಗಾಂವ್ ಮತ್ತು ಮಹಾಡ್‌ಗಳಲ್ಲಿ ನಡೆದ ಕೋಮುವಾರು ಗಲಭೆಗಳಿಗೆ ಸಂಬಂಧಿಸಿದೆ. ಮಹಾರಾಷ್ಟ್ರ ರಾಜ್ಯ ಸರಕಾರವು ಈ ಕೋಮುಗಲಭೆಗಳ ವಿವಿಧ ಮುಖಗಳ ಕುರಿತು ವಿಚಾರಣೆ ನಡೆಸುವಂತೆ ನ್ಯಾಯಮೂರ್ತಿ ಡಿ.ಪಿ. ಮದನ್ ಅವರ ನೇತೃತ್ವದಲ್ಲಿ ವಿಚಾರಣಾಆಯೋಗವೊಂದನ್ನು ನೇಮಿಸಿತ್ತು. ಮದನ್ ಆಯೋಗ ಯಾವುದೇ ದಾಕ್ಷಿಣ್ಯಕ್ಕೊಳಪಡದೆ ನಿರ್ಭಯವಾಗಿ ವಿಚಾರಣೆ ನಡೆಸಿ ಏಳು ಸಂಪುಟಗಳ ತನ್ನ ವರದಿಯನ್ನು ಸರಕಾರಕ್ಕೆ ಒಪ್ಪಿಸಿತ್ತು. ವರದಿ ಪ್ರಕಟವಾದೊಡನೆಯೇ ನಾನು ಅದನ್ನು ವಿಮರ್ಶಿಸಿ ಲೇಖನವೊಂದನ್ನು ಬರೆದು ಸಿ. ಪಿ. ಐ. (ಎಂ) ನ ಮಹಾರಾಷ್ಟ್ರ ರಾಜ್ಯ ಸಮಿತಿಯ ಮುಖಪತ್ರವಾದ 'ಜೀವನ ಮಾರ್ಗ'ದಲ್ಲಿ ಪ್ರಕಟಣೆಗಾಗಿ ಕಳುಹಿಸಿದ್ದೆ. ಆದರೆ ಆಗ ಜಾರಿಯಲ್ಲಿ ಕಠಿಣ ಸೆನ್ಸಾರ್‌ಶಿಪ್ ನಿಯಮಗಳಿಂದಾಗಿ ಸೆನ್ಸಾರ್ ಅಧಿಕಾರಿಗಳು ಅದರ ಪ್ರಕಟಣೆಗೆ ಅನುಮತಿ ನಿರಾಕರಿಸಿದರು.

ಭಿವಂಡಿ. ಜಲಗಾಂವ್ ಮತ್ತು ಮಹಾಡ್ ಪ್ರದೇಶಗಳಲ್ಲಿ ಕೋಮುವಾರು ಗಲಭೆಗಳು ನಡೆದದ್ದು ಮೇ 7, 8, 1970 ರಂದು ಮತ್ತು ಅನಂತರದ ಕೆಲವು ದಿನಗಳಲ್ಲಿ. ಈ ಅವಧಿಯಲ್ಲಿ ಇಂದಿರಾಗಾಂಧಿಯ ಉತ್ಕಟ ಅಭಿಮಾನಿಗಳಲ್ಲೊಬ್ಬರಾದ ವಿ. ಪಿ. ನ್ಯಾಕ್ ಮಹಾರಾಷ್ಟ್ರದ ಮುಖ್ಯಮಂತ್ರಿಯಾಗಿದ್ದರು. ರಾಜ್ಯ ಸರಕಾರದ ಗೃಹಖಾತೆ ಆಕಾಲದಲ್ಲಿ ವಿ. ಪಿ. ನ್ಯಾಕ್ ಅವರ ಅಧೀನದಲ್ಲೇ ಇದ್ದ ಕಾರಣ ಗಲಭೆಯ ವೇಳೆ ಕೈಗೊಳ್ಳಲಾದ ಪೋಲೀಸ್ ಕಾರ್‍ಯಾಚರಣೆಯಲ್ಲಿ ಅವರದ್ದೇ ಕೊನೆಯ ಮಾತಾಗಿತ್ತು ಎಂಬುದೂ ಸ್ಪಷ್ಟ.

"ಸಪ್ಟೆಂಬರ್ 1969 ರಲ್ಲಿ ಗುಜರಾತಿನ ಅಹಮದಾಬಾದ್ ಮತ್ತಿತರ ನಗರಗಳನ್ನು ನಡುಗಿಸಿದ ಮುಸ್ಲಿಮರ ಭೀಕರ ಕಗ್ಗೊಲೆಗಳನ್ನನುಸರಿಸಿ ಭಿವಂಡಿ, ಜಲಗಾಂವ್‌ಗಳಲ್ಲಿ ಕೋಮುವಾರು ಗಲಭೆಗಳು ನಡೆದುವೆಂಬುದನ್ನೂ ಗಮನಿಸಬೇಕು. ಈ ಎರಡು ಗಲಭೆಗಳ ನಡುವಿನ ಅಂತರವನ್ನು ಎರಡೂ ಕಡೆಯ ಕೋಮುವಾದಿ ಶಕ್ತಿಗಳು ಮತೀಯ ದ್ವೇಷ ಮತ್ತು ಉದ್ರೇಕಕಾರಿ ವಾತಾವರಣವನ್ನು ನಿರ್ಮಿಸಲು ಯಥೇಷ್ಟವಾಗಿ ಬಳಸಿಕೊಂಡವು."

ಈ ಗಲಭೆಗಳಿಂದಾಗಿ ಎರಡೂ ಮತಾನುಯಾಯಿಗಳಲ್ಲುಂಟಾದ ಜೀವಹಾನಿಯ ಬಗ್ಗೆ ಮದನ್ ಆಯೋಗ ತಿಳಿಸಿರುವಂತೆ ಭಿವಂಡಿ ಮತ್ತು ಅದರ ಆಸುಪಾಸಿನ ಹಳ್ಳಿಗಳಾದ ಖೋಣಿ ಮತ್ತು ನಾಗಾಂವ್‌ಗಳಲ್ಲಿ ಒಟ್ಟು 78 ಮಂದಿ ಮೃತಪಟ್ಟಿದ್ದಾರೆ. ಇವರಲ್ಲಿ ಹಿಂದೂಗಳು 17 ಮಂದಿ, ಮುಸ್ಲಿಮರು 50 ಮಂದಿ ಮತ್ತು ಇಬ್ಬರು ಯಾವ ಮತಕ್ಕೆ ಸೇರಿದವರೆಂದು ಗೊತ್ತಾಗಿರಲಿಲ್ಲ. ಇವರಲ್ಲದೆ ಒಂಭತ್ತು ಮಂದಿ ಮುಸ್ಲಿಮರು ಪೋಲೀಸ್ ಗೋಲಿಬಾರಿಗೆ ಬಲಿಯಾಗಿ ಸತ್ತಿದ್ದಾರೆ. ಹಲವಾರು ಮಂದಿಗೆ ತೀವ್ರ ಸ್ವರೂಪದ ಗಾಯಗಳಾಗಿವೆ; ಕೆಲವರು ಜೀವಮಾನ ಪರ್ಯಂತ ಅಂಗವಿಕಲರಾಗಿದ್ದಾರೆ. ಹಿಂದೂಗಳಿಗೆ ಸೇರಿದ ಒಟ್ಟು ರೂ. 7,356,206ಗಳಷ್ಟು ಮೊತ್ತದ ಆಸ್ತಿಪಾಸ್ತಿ ನಾಶವಾಗಿದೆ. ಹಾನಿಯಾದ ಮುಸ್ಲಿಮರ ಆಸ್ತಿಪಾಸ್ತಿಗಳ ಬೆಲೆ ರೂ. 6,654,654.

ಜಲಗಾಂವ್‌ನಲ್ಲಿ ನಡೆದ ಗಲಭೆ ಬರ್ಬರ ಮತ್ತು ಅಪ್ರಚೋದಿತ ಹತ್ಯಾಕಾಂಡದ ಭೀಕರ ಚಿತ್ರಣವೊಂದನ್ನು ನೀಡಿದೆ. ಇಲ್ಲಿ ಒಟ್ಟು 43 ಮಂದಿ ಸತ್ತಿದ್ದಾರೆಂದು ಮದನ್ ವರದಿ ತಿಳಿಸಿದೆ. "ಇವರಲ್ಲಿ ಓರ್ವ ಮಾತ್ರ ಹಿಂದೂ; ಆತ ತಲೆಬುರುಡೆಗಾದ ಪೆಟ್ಟಿನಿಂದ ತೀರಿಕೊಂಡಿದ್ದಾನೆ. ಮೃತಪಟ್ಟ 42 ಮಂದಿ ಮುಸ್ಲಿಮರಲ್ಲಿ ಆರುಮಂದಿ ಗಂಡಸರು. 11 ಸ್ತ್ರೀಯರು, 11 ಗಂಡುಮಕ್ಕಳು ಮತ್ತು 14 ಹೆಣ್ಣುಮಕ್ಕಳು. ಗಾಯಗೊಂಡವರಲ್ಲಿ 47 ಜನರು ಜಲಗಾಂವ್ ಸಿವಿಲ್ ಆಸ್ಪತ್ರೆಯಲ್ಲಿ ಒಳರೋಗಿಗಳಾಗಿಯೂ 49 ಜನರು ಹೊರರೋಗಿಗಳಾಗಿಯೂ ಚಿಕಿತ್ಸೆ ಪಡೆದಿದ್ದಾರೆ. ಒಳರೋಗಿಗಳಾಗಿ ಚಿಕಿತ್ಸೆ ಪಡೆದ 47 ಮಂದಿಯಲ್ಲಿ ಹತ್ತು ಜನರಿಗೆ ಪೋಲೀಸರ ಗುಂಡಿನೇಟಿನಿಂದ ಗಾಯಗಳಾಗಿವೆ. ಇವರಲ್ಲಿ ಒಂಭತ್ತು ಮಂದಿ ಹಿಂದೂಗಳು ಮತ್ತು ಹನ್ನೆರಡು ವರ್ಷ ಪ್ರಾಯದ ಒಬ್ಬ ಬಾಲಕ ಮುಸ್ಲಿಂ. ಮುಸ್ಲಿಮರಿಗೆ ಸೇರಿದ 112 ಮನೆ ಮತ್ತು ಸ್ವತ್ತುಗಳಿಗೆ ಬೆಂಕಿಹಚ್ಚಲಾಗಿದೆ; ಇವುಗಳಲ್ಲಿ 87 ಸಂಪೂರ್ಣ ನಿರ್ನಾಮವಾಗಿವೆ, ಇದಲ್ಲದೆ ಮುಸ್ಲಿಮರಿಗೆ ಸೇರಿದ ಇಪ್ಪತ್ತೈದು ಮನೆಗಳಿಗೆ ಇತರ ರೀತಿಯ ಹಾನಿಯುಂಟಾಗಿದೆ; ಮತ್ತು 250 ಮನೆಗಳನ್ನು ಕೊಳ್ಳೆ ಹೊಡೆಯಲಾಗಿದೆ. ಹಿಂದೂಗಳಿಗೆ ಸೇರಿದ ಆರು ಮನೆಗಳಿಗೆ ಬೆಂಕಿಹಚ್ಚಲಾಗಿದ್ದು ಇವುಗಳಲ್ಲಿ ಮೂರು ಸಂಪೂರ್ಣ ಸುಟ್ಟುಹೋಗಿವೆ. ಒಂದು ಭಾಗಶಃ ಸುಟ್ಟುಹೋಗಿದೆ. ಇನ್ನೊಂದು ಮನೆಗೆ ಬೇರೆ ಹಾನಿಯಾಗಿದೆ ಮತ್ತೊಂದನ್ನು ಲೂಟಿಮಾಡಲಾಗಿದೆ. ಹಿಂದೂಗಳ ಮನೆಗಳಿಗೆ ಬೆಂಕಿಹಿಡಿಯಲು ಮುಸ್ಲಿಮರ ಮನೆಗಳಿಗೆ ಹಚ್ಚಿದ ಬೆಂಕಿ ಹಬ್ಬಿಕೊಂಡುದೇ ಕಾರಣ. ಇದರಿಂದಾಗಿ ಮುಸ್ಲಿಮರಿಗೆ ಒಟ್ಟು ರೂ. 3,390,997 ರಷ್ಟು ನಷ್ಟವಾಗಿದೆ ಮತ್ತು ಹಿಂದುಗಳಿಗಾದ ನಷ್ಟ ರೂ. 83,725."

"ಭಿವಂಡಿ ಮತ್ತು ಜಲಗಾಂವ್‌ಗೆ ಹೋಲಿಸಿದರೆ ಕೊಲಾಬಾ ಜಿಲ್ಲೆಯ ಮಹಾಡ್‌ನಲ್ಲಿ ನಡೆದ ಗಲಭೆಗಳು ಅಲ್ಪ ಪ್ರಮಾಣದ್ದೆಂದೇ ಹೇಳಬೇಕು. ಇಲ್ಲಿ ಯಾವುದೇ ಜೀವಹಾನಿಯಾಗಿಲ್ಲ. ಆದರೆ ಮುಸ್ಲಿಮರು ರೂ. 282.493 ರಷ್ಟು ಮೊತ್ತದ ಆಸ್ತಿಪಾಸ್ತಿಗಳನ್ನು ಕಳಕೊಂಡಿದ್ದಾರೆ. ಹಿಂದೂಗಳಿಗೆ ಇಲ್ಲಿ ಉಂಟಾದ ನಷ್ಟ ರೂ. 17,570." ಈ ಕೋಮುಗಲಭೆಗಳಿಗೆ ಯಾರು ಕಾರಣ ಮತ್ತು ಗಲಭೆ ನಡೆಯುತ್ತಿದ್ದಾಗ ಇಂದಿರಾ ಆಡಳಿತೆಯ ಪೋಲೀಸರು ಏನು ಮಾಡುತ್ತಿದ್ದರೆನ್ನುವುದಷ್ಟೇ ನಾವು ಕೇಳುವ ಪ್ರಶ್ನೆ.

ಭಿವಂಡಿ, ಖೋಣಿ ಮತ್ತು ನಾಗಾಂವ್‌ಗಳಲ್ಲಿ ಕೋಮುವಾರು ದ್ವೇಷ ಹೊತ್ತಿಕೊಳ್ಳಲು ಜನಸಂಘ, ಶಿವಸೇನೆ, ಹಿಂದೂ ಮಹಾಸಭೆ ಮತ್ತು ಮಜ್ಲಿಸ್-ಎ-ತಮಿರ್-ಎ-ಮಿಲ್ಲತ್‌ಗಳಮುಂದಾಳುಗಳೇ ಕಾರಣವೆಂದು ಮದನ್ ಆಯೋಗ ಸ್ಪಷ್ಟವಾಗಿ ತಿಳಿಸಿದೆ. ಈ ಮುಂದಾಳುಗಳ ಹೆಸರುಗಳನ್ನೂ ಅದು ಹೇಳಿದೆ. "ಈ ಪ್ರದೇಶದಲ್ಲಿ ಕೋಮುವಾರು ದ್ವೇಷ ಭಾವನೆಯನ್ನು ಉತ್ಕಟವಾಗಿ ಪ್ರಚೋದಿಸುವುದಕ್ಕೆ ರಾಷ್ಟ್ರೀಯ ಉತ್ಸವ ಮಂಡಲವೆಂಬ ಸಂಸ್ಥೆ ಕಾರಣ. ರಾಷ್ಟ್ರೀಯ ಉತ್ಸವ ಮಂಡಲದ ಹೆಚ್ಚಿನ ಸದಸ್ಯರು ಜನಸಂಘಕ್ಕೆ ಸೇರಿದವರು; ಇಲ್ಲವೇ ಜನಸಂಘದ ಪರವಾಗಿರುವವರು. ಕೆಲವೇ ಜನರನ್ನು ಹೊರತುಪಡಿಸಿದರೆ ಇನ್ನುಳಿದವರು ಶಿವಸೇನೆಗೆ ಸೇರಿದ್ದಾರೆ."

ಜಲಗಾಂವ್‌ನಲ್ಲಿ ಮತೀಯ ಗಲಭೆಗಳ ಬಗ್ಗೆ ಮದನ್ ಆಯೋಗ ಹೀಗೆ ಹೇಳಿದೆ:- "ಜಲಗಾಂವ್‌ನಲ್ಲಿ ಕೋಮುವಾರು ಉದ್ರೇಕವನ್ನು ಹಬ್ಬಿಸಲು 1. ಜನಸಂಘದ ಜಲಗಾಂವ್ ನಗರ ಶಾಖೆ. 2. ಜಲಗಾಂವ್ ನಗರ ಜನಸಂಘದ ಶಾಖೆಯಿಂದಲೇ ಸಂಪೂರ್ಣವಾಗಿ ನಿರ್ವಹಿಸಲ್ಪಡುತ್ತಿರುವ ಶ್ರೀ ರಾಮ ತರುಣ ಮಂಡಲ ಮತ್ತು ಜನಸಂಘದ ಜಲಗಾಂವ್ ಜಿಲ್ಲಾ ಶಾಖೆ- ಇವುಗಳೇ ಕಾರಣ."

ಕೋಮುಗಲಭೆಗಳ ವೇಳೆ ಪೋಲೀಸರು ನಿರ್ವಹಿಸಿದ ಪಾತ್ರದ ಪ್ರಶ್ನೆಯೂ ತುಂಬಾ ಮಹತ್ವದ್ದಾಗಿದೆ. ಇದನ್ನು ಮೂರು ವಿಭಾಗಗಳಾಗಿ ವಿಂಗಡಿಸಬಹುದು. 1. ಮತೀಯ ಗಲಭೆಗಳು ಉಂಟಾಗುವುದನ್ನು ತಡೆಗಟ್ಟಲು ಅಗತ್ಯವಾದ ಕಾನೂನು ಮತ್ತು ಶಿಸ್ತಿನ ಕ್ರಮಗಳನ್ನು ಸಾಕಷ್ಟು ಪ್ರಮಾಣದಲ್ಲಿ ಕೈಗೊಳ್ಳಲಾಗಿದೆಯೇ ? 2. ಗಲಭೆಗಳನ್ನು ನಿಲ್ಲಿಸಿ ಶಾಂತಿಯನ್ನು ನೆಲೆಗೊಳಿಸಿದ ಬಗೆ ಹೇಗೆ ? ಅಪರಾಧಿಗಳನ್ನು ಪತ್ತೆಹಚ್ಚಲು ಕೈಗೊಂಡ ವಿಚಾರಣೆ ಹೇಗೆ ನಡೆಯಿತು ಮತ್ತು ಅಪರಾಧಿಗಳ ಮೇಲೆ ಮೊಕದ್ದಮೆಗಳನ್ನು ಹೇಗೆ ದಾಖಲು ಮಾಡಿಕೊಳ್ಳಲಾಯಿತು ?

ಕೋಮುವಾರು ಗಲಭೆಗಳು ಆರಂಭಗೊಳ್ಳುವುದನ್ನು ತಡೆಗಟ್ಟುವಲ್ಲಿ ಆಡಳಿತೆಯು ವಿಫಲವಾದ 25 ನಿದರ್ಶನಗಳನ್ನು ಮದನ್ ಆಯೋಗ ತೋರಿಸಿಕೊಟ್ಟಿದೆ. ಉದಾಹರಣೆಗೆ ಭಿವಂಡಿ, ಖೋಣಿ ಮತ್ತು ನಾಗಾಂವ್ ಪ್ರದೇಶಗಳಲ್ಲಿ ಮುಖ್ಯವಾಗಿ 1. ಕೋಮುವಾರು ಪ್ರಚಾರವನ್ನೂ ವದಂತಿಗಳನ್ನೂ ತಡೆಗಟ್ಟುವಲ್ಲಿ ಆಡಳಿತವು ವಿಫಲಗೊಂಡಿದೆ. 2. ರಾಷ್ಟ್ರೀಯ ಉತ್ಸವ ಮಂಡಲದ ನಿಜವಾದ ಉದ್ದೇಶಗಳನ್ನು ಅರ್ಥಮಾಡಿಕೊಳ್ಳಲು ಅಧಿಕಾರಿಗಳು ವಿಫಲರಾಗಿದ್ದಾರೆ. 3 ಧಾರ್ಮಿಕ ಸ್ಥಳಗಳಾದ ದೇವಸ್ಥಾನಗಳಲ್ಲಿ ರಾಷ್ಟ್ರೀಯ ಉತ್ಸವ ಮಂಡಲವು ಕೋಮುವಾರು ಸಭೆಗಳನ್ನು ನಡೆಸಿ ಕೋಮುವಾರು ಪ್ರಚಾರ ನಡೆಸುವುದರ ವಿರುದ್ಧ ಅಧಿಕಾರಿಗಳು ಏನೂ ಕ್ರಮ ತೆಗೆದುಕೊಂಡಿಲ್ಲ. 4. ಕೋಮುವಾದಿ ಭಾಷಣಗಳನ್ನು ಮಾಡಿದ ಹಿಂದೂ ಮತ್ತು ಮುಸ್ಲಿಂ ಮುಂದಾಳುಗಳ ವಿರುದ್ಧ ಭಾರತೀಯ ದಂಡ ಸಂಹಿತೆಯ ಸೆಕ್ಷನ್ 153 ಎ ಯನ್ವಯ ಕಾನೂನಿನ ಕ್ರಮಕೈಗೊಳ್ಳುವಲ್ಲಿ ಪೋಲೀಸರು ಅಸಫಲರಾಗಿದ್ದಾರೆ. 5. 1964 ರಲ್ಲಿ ಮತ್ತು ಅನಂತರದ ಹಲವು ವರ್ಷಗಳಲ್ಲಿ ಶಿವಜಯಂತಿ ಉತ್ಸವದ ಸಂಬಂಧ ಏರ್ಪಡಿಸಲಾದ ಮೆರವಣಿಗೆಗಳಲ್ಲಿ ಪುಂಡಾಟಿಕೆ ನಡೆಸಿದ ಮೆರವಣಿಗೆಗಾರರನ್ನು ಪೋಲೀಸರು ದಸ್ತಗಿರಿ ಮಾಡಿರಲಿಲ್ಲ ಮತ್ತು ಅವರು ಮುಂದೆ ಈರೀತಿ ವರ್ತಿಸದಂತೆ ಮಾಡಲು ಅಗತ್ಯವಾಗಿ ಕೈಗೊಳ್ಳಬೇಕಾಗಿದ್ದ ಯಾವುದೇ ಕಾನೂನಿನ ಕ್ರಮವನ್ನೂ ಪೋಲೀಸರು ತೆಗೆದುಕೊಂಡಿಲ್ಲ. 6. 1951ರ ಮುಂಬಯಿ ಪೋಲೀಸ್ ಕಾಯ್ದೆಯ ಸೆಕ್ಷನ್ 37 (1) ರನ್ವಯ ಮೆರವಣಿಗೆಯಲ್ಲಿ ಶಸ್ತ್ರಾಸ್ತ್ರಗಳನ್ನು ಕೊಂಡೊಯ್ಯುವುದು ನಿಷಿದ್ಧವಾಗಿದ್ದರೂ ಭಿವಂಡಿಯಲ್ಲಿ ಶಿವಜಯಂತಿ ಮೆರವಣಿಗೆಗೆ ಬಂದವರಾಗಲೀ ಅಥವಾ ಇತರ ಮೆರವಣಿಗೆಗಾರರಾಗಲೀ ತಮ್ಮ ಕೈಯಲ್ಲಿ ಲಾಠಿಗಳನ್ನು ಹಿಡಿದುಕೊಂಡು ಬರುವುದನ್ನು ಪೋಲೀಸರು ತಡೆದಿರಲಿಲ್ಲ. 7. ಮೇ 7, 1970 ರಂದು ಶಿವಜಯಂತಿ ಮೆರವಣಿಗೆ ಆರಂಭವಾಗುವ ಸಮಯದಲ್ಲಿ ನಿಷಿದ್ಧವಾಗಿದ್ದ ಕೆಲವು ಘೋಷಣೆಗಳನ್ನು ಕೂಗಿದುದಕ್ಕಾಗಿ ಬಂಧಿಸಲ್ಪಟ್ಟಿದ್ದ ಇಬ್ಬರು ಮೆರವಣಿಗೆಗಾರರನ್ನು ಬಿಡುಗಡೆ ಮಾಡುವ ಮೂಲಕ ಅಧಿಕಾರಿಗಳು ಪ್ರಮಾದವೆಸಗಿದ್ದಾರೆ. ಈ ದಿಸೆಯಲ್ಲಿ ಮೆರವಣಿಗೆಗಾರರ ಗದ್ದಲಕ್ಕೂ ಕೆಲವು ಸ್ಥಳೀಯ ಹಿಂದೂ ಮುಖಂಡರ ಬೆದರಿಕೆಗೂ ಅಧಿಕಾರಿಗಳು ಮಣಿದಿದ್ದಾರೆ.

ಭಿವಂಡಿ, ಖೋಣಿ ಮತ್ತು ನಾಗಾಂವ್‌ಗಳಲ್ಲಿ ನಡೆದ ಗಲಭೆಗಳ ಕುರಿತು ಮದನ್ ವರದಿಯು, "ಕೆಲವೆಡೆ ಪೋಲೀಸ್ ಅಧಿಕಾರಿಗಳೂ, ಪೋಲೀಸರೂ ಕೋಮುವಾರು ಪಕ್ಷಪಾತ ತೋರಿಸಿರುವುದನ್ನು ಬಿಟ್ಟರೆ, ದೊಂಬಿಯನ್ನು ಹತ್ತಿಕ್ಕಲು ಅಧಿಕಾರಿಗಳು ಕ್ಲಪ್ತ ಕಾಲದಲ್ಲಿ ಸೂಕ್ತ ಹಾಗೂ ದಕ್ಷ ರೀತಿಯ ಕ್ರಮಗಳನ್ನು ಕೈಗೊಂಡಿದ್ದಾರೆಂದು ಹೇಳಿದೆಯಲ್ಲದೆ ಕೆಲವರು ಪೋಲೀಸ್ ಅಧಿಕಾರಿಗಳ ಬಗ್ಗೆ ಮೆಚ್ಚುಗೆಯನ್ನೂ ವ್ಯಕ್ತಪಡಿಸಿದೆ. "ಡಿವಿಜ

ನಲ್ ಮೆಜಿಸ್ಟ್ರೇಟ್ ಡಿ. ಎನ್. ಕಪೂರ್, ಡಿ. ವೈ. ಎಸ್. ಎ. ಎಂ. ಆರ್. ದಿವಾಟೆ ಮುಂತಾದ ಹಿರಿಯ ಪೋಲೀಸ್ ಅಧಿಕಾರಿಗಳು ತಾವು ಸ್ವತಃ ಗಾಯಗೊಂಡಿದ್ದರೂ ತಮ್ಮ ಮೇಲಾಗಬಹುದಾದ ಯಾವ ಅಪಾಯವನ್ನೂ ಲಕ್ಷಿಸದೆ ತಮ್ಮ ಕರ್ತವ್ಯವನ್ನು ನಿರ್ವಹಿಸಿದ್ದಾರೆ" ಎಂದು ವರದಿಯಲ್ಲಿ ಯಲ್ಲಿ ಹೇಳಲಾಗಿದೆ.

ಆದೇ ವೇಳೆಗೆ ಪೋಲೀಸ್ ಅಧಿಕಾರಿಗಳು ತೋರಿಸಿದ ಪಕ್ಷಪಾತ ವರ್ತನೆಯ ಹಲವು ಘಟನೆಗಳನ್ನೂ ಅದು ವಿವರಿಸಿದೆ. "ಹಿಂದೂ ಗಲಭೆಕೋರರು ದೊಂಬಿಗಿಳಿಯದಂತೆ, ಆಸ್ತಿಪಾಸ್ತಿಗಳನ್ನು ಲೂಟಿಮಾಡದಂತೆ ಅಥವಾ ಅವಕ್ಕೆ ಕೊಳ್ಳಿಯಿಕ್ಕದಂತೆ ಪೋಲೀಸರಾಗಲೀ ಪೋಲೀಸ್ ಅಧಿಕಾರಿಗಳಾಗಲೀ ಅವರನ್ನು ತಡೆಯಲಿಲ್ಲ. ದೊಂಬಿಯಲ್ಲಿ ತೊಡಗಿದ್ದ ಜನರ ಮೇಲೆ ಕ್ರಮತೆಗೆದುಕೊಳ್ಳುವಾಗ ಅವರು ಪಕ್ಷಪಾತದ ನೀತಿ ಅನುಸರಿಸಿದ್ದಾರೆ, ನಿಯಂತ್ರಣ ಕೊಠಡಿಗೆ ತಪ್ಪಾದ ವರದಿಗಳನ್ನು ಕಳುಹಿಸಿದ್ದಾರೆ, ಇಲ್ಲವೇ ದೊಂಬಿ, ಕೊಳ್ಳೆಹೊಡೆಯುವುದು ಮತ್ತು ಕೊಳ್ಳಿಯಿಕ್ಕುವಂತಹ ದುಷ್ಕೃತ್ಯಗಳಲ್ಲಿ ನಿರತರಾಗಿದ್ದವರು ಮುಸ್ಲಿಮರು ಮಾತ್ರ ಹೊರತು ಹಿಂದೂಗಳು ಹಾಗೆ ಮಾಡಲಿಲ್ಲವೆಂಬುದಾಗಿ ಪೋಲೀಸ್ ಪ್ರಥಮ ವರದಿ (ಎಫ್. ಐ ಆರ್.) ಬರೆದುಕೊಂಡಿದ್ದಾರೆ. ಕೆಲವೆಡೆ ಹಿಂದೂ ಗಲಭೆಕೋರರು ಮುಸ್ಲಿಮರ ಸೊತ್ತುಗಳನ್ನು ಲೂಟಿಮಾಡುತ್ತಿದ್ದಾಗ ಅಥವಾ ಅದಕ್ಕೆ ಬೆಂಕಿ ಹಚ್ಚುತ್ತಿದ್ದಾಗ ಪೋಲೀಸರೂ, ಅಧಿಕಾರಿಗಳೂ ಅದಕ್ಕೆ ಸಹಕಾರ ನೀಡಿರುವಂತಹ ಅನೇಕ ಘಟನೆಗಳು ನಮ್ಮ ಆಯೋಗದ ಮುಂದೆ ಸಾಬೀತಾಗಿವೆ."

ಜಲಗಾಂವ್‌ನ ಗಲಭೆಗಳ ಬಗ್ಗೆ ಮದನ್ ಆಯೋಗದ ವರದಿ, "ಈ ಗಲಭೆಗಳನ್ನು ತಡೆಯುವ ಸಲುವಾಗಿ ಅಧಿಕಾರಿಗಳು ಕೈಗೊಂಡ ಕ್ರಮಗಳು ಏನೇನೂ ಸಾಲದು. ಈ ರೀತಿ ಸಾಕಷ್ಟು ಮುನ್ನೆಚ್ಚರಿಕೆಯ ಕ್ರಮ ಕೈಗೊಳ್ಳದಿರುವುದಕ್ಕೆ ಪೋಲೀಸ್ ಸುಪರಿಂಟೆಂಡೆಂಟ್ ಎಸ್. ಟಿ ರಾಮನ್ ಮತ್ತು ಸಬ್‌ಇನ್ಸ್‌ಪೆಕ್ಟರ್ ಎಸ್. ಪಿ. ಭಾಲೇರಾವ್ ಅವರ ಜನಸಂಘ ಪರ ಪಕ್ಷಪಾತ ಧೋರಣೆ ಮತ್ತು ರಾಜ್ಯದ ಇಂಟೆಲಿಜೆನ್ಸ್ ಅಧಿಕಾರಿಗಳಾದ ಸಬ್‌ಇನ್ಸ್‌ಪೆಕ್ಟರ್ ಬಿ.ಪಿ. ಬಾದ್ಗುಜರ್ ಮತ್ತು ಪಿ. ಎಸ್. ಐ., ವಿ.ಕೆ. ಕುಲಕರ್ಣಿ ಅವರ ಅಸಾಮರ್ಥ್ಯ ಹಾಗೂ ಅದಕ್ಷತೆಗಳೇ ಕಾರಣ. ಇದರೊಂದಿಗೆ ಪಿ.ಬಿ. ಬಾದ್ಗುಜರ್ ಅವರ ಮುಸ್ಲಿಂವಿರೋಧಿ ಪೂರ್ವಾಗ್ರಹವೂ ಸೇರಿದೆ" ಎಂದೂ ಹೇಳಿದೆ.

ಗಲಭೆಗಳನ್ನು ತಡೆಗಟ್ಟಲು ಅಧಿಕಾರಿಗಳು ಕೈಗೊಂಡ ಕ್ರಮಗಳು ಅದೆಷ್ಟು ಅಸಮರ್ಪಕವಾಗಿದ್ದವು ಎನ್ನುವುದಕ್ಕೆ ಪುರಾವೆಯಾಗಿ ವರದಿ ಹೀಗೆ ಹೇಳಿದೆ. "ಜೋಶಿಪೇಟ್‌ನಲ್ಲಿ ಮುಸ್ಲಿಮರ ಐವತ್ತನಾಲ್ಕು ಮನೆಗಳಿಗೆ ಬೆಂಕಿಯಿಕ್ಕಲಾಗಿದ್ದರೂ ಅಗ್ನಿಯಜ್ವಾಲೆ ಎರಡು ಮೈಲು ದೂರದವರೆಗೆ ಕಾಣಿಸಿಕೊಂಡಿದ್ದರೂ ಈ ಪುಂಡಾಟಿಕೆಯನ್ನು ತಡೆಯಲು ಯಾವುದೇ ಪ್ರಯತ್ನ ನಡೆಯಲಿಲ್ಲ." "ಭಿಲ್‌ಪುರ ಮತ್ತು ಇಸ್ಲಾಂಪುರದಲ್ಲಿ ಸ್ವರಕ್ಷಣೆಗಾಗಿ ಒಂದೆಡೆ ಸೇರಿದ್ದ ಮುಸ್ಲಿಮರನ್ನು ರಸ್ತೆಗಳಿಂದ ಓಡಿಸುವುದಕ್ಕಷ್ಟೇ ಪೋಲೀಸರು ತಮ್ಮೆಲ್ಲ ಸಾಮರ್ಥ್ಯವನ್ನು ಉಪಯೋಗಿಸಿ ಬಳಿಕ ಅವರೆಲ್ಲರನ್ನೂ ಒಂದೆಡೆ ಕೂಡಿಹಾಕಿದರು. ಮದೀನಾ ಮಸೀದಿಗೆ ಬೆಂಕಿಹಚ್ಚಲು ಪ್ರಯತ್ನಿಸುತ್ತಿದ್ದ ದುಷ್ಕರ್ಮಿಗಳ ಗುಂಪೊಂದನ್ನು ತಡೆಯಲು ಹೆಣಗಾಡುತ್ತಿದ್ದ ಇಬ್ಬರು ಮುಸ್ಲಿಮರನ್ನು ಪೋಲೀಸರು ಬಂಧಿಸಿದರು. ಇದು ಹಿಂದೂ ಗಲಭೆಕೋರರಿಗೆ ಮುಸ್ಲಿಂಪ್ರದೇಶಗಳನ್ನು ಒಳಹೊಕ್ಕು ಅವರ ಮನೆಗಳಿಗೆ ಬೆಂಕಿಯಿಕ್ಕಲು ಮುಕ್ತಅವಕಾಶವನ್ನು ಕಲ್ಪಿಸಿಕೊಟ್ಟಿತು." ಇಂದಿರಾ ಆಡಳಿತೆಯಲ್ಲಿ ಪೋಲೀಸರು ಕೋಮುಗಲಭೆಗಳ ವೇಳೆ ತೋರಿಸಿದ ವರ್ತನೆ ಹೀಗಿತ್ತೆಂಬುದಕ್ಕೆ ಮೇಲಿನ ಘಟನೆಗಳೇ ಸಾಕ್ಷಿ.

ಪೋಲೀಸರು ಗಲಭೆಗಳಿಗೆ ಸಂಬಂಧಪಟ್ಟ ಪ್ರಕರಣಗಳ ತಪಾಸಣೆಯನ್ನು ಹೇಗೆ ನಡೆಸಿದರೆಂಬುದನ್ನು ಈಗ ನೋಡೋಣ. ಭಿವಂಡಿ, ಜೋಣಿ ಮತ್ತು ನಾಗಾಂವ್‌ಗಳಲ್ಲಿನ ಗಲಭೆಗಳಿಗೆ ಸಂಬಂಧಿಸಿ ವಿಚಾರಣೆಯ ವೇಳೆ ಸಾಕ್ಷ್ಯಗಳ ಮೂಲಕ ರುಜುವಾತಾದ 17 ಘಟನೆಗಳನ್ನು ಆಯೋಗ ದಾಖಲೆ ಮಾಡಿಕೊಂಡಿದೆ. ಅವುಗಳಲ್ಲಿ ಕೆಲವು ಇಂತಿವೆ.

1. "ಭಿವಂಡಿಯ ವಿಶೇಷ ತನಿಖಾದಳದ (Special investigation squad) ಕಾರ್ಯನಿರ್ವಹಣೆಯು ಕೋಮುವಾದಿ ಪಕ್ಷಪಾತ ನೀತಿಗೆ ಜೀವಂತ ನಿದರ್ಶನವಾಗಿದೆ."

2 "ಈ ದಳದ ಅಧಿಕಾರಿಗಳು ಅಪರಾಧಿಗಳು ಯಾರು, ಯಾರು ಅಲ್ಲವೆಂಬುದನ್ನು ಖಚಿತಪಡಿಸಿಕೊಳ್ಳುವ ಗೊಡವೆಗೇ ಹೋಗದೆ ಸಾಧ್ಯವಾದಷ್ಟು ಹೆಚ್ಚು ಮುಸ್ಲಿಮರನ್ನು ಅಪರಾಧಿಗಳೆಂದು ದಾಖಲುಮಾಡಿಕೊಂಡರು. ಹಾಗೆಯೇ ಸಾಧ್ಯವಾದಷ್ಟು ಹೆಚ್ಚು ಹಿಂದೂಗಳನ್ನು ನಿರಪರಾಧಿಗಳೆಂದೂ ತೀರ್ಮಾನಿಸಿಕೊಂಡರು."

3. "ಈ ಉದ್ದೇಶಕ್ಕಾಗಿ ಭಿವಂಡಿ ನಗರದ ಪೋಲೀಸ್ ಠಾಣೆಯ ಮುದ್ದೇಮಾಲ್ ರಿಜಿಸ್ಟರಿನಲ್ಲಿ ಕ್ರಿಮಿನಲ್ ನಂಬರುಗಳನ್ನು ಬರೆದುಕೊಳ್ಳುವುದು ಬೇಡವೆಂದು ತನಿಖಾದಳದ ಅಧಿಕಾರಿಗಳು ಹೇಳಿದ್ದರು. ಮುಂದೆ ತಮಗೆ ಬೇಕಾದಂತೆ ಅವುಗಳನ್ನು ಬರೆದುಕೊಳ್ಳುವುದಕ್ಕಾಗಿ ಹೀಗೆ ಹೇಳಲಾಯಿತು."

4. ಮಹಾರಾಷ್ಟ್ರ ಸ್ಟೇಟ್ ಕ್ರೈಂ ಎಂಡ್ ರೇಲ್ವೇ ಬ್ರಾಂಚ್ (ಸಿ.ಐ.ಡಿ.)ನ ಮಾನ್ಯುಯಲ್ ಆಫ್ ಇನ್ಸ್ಟ್ರಕ್ಷನ್‌ನ ಮೂರನೇ ಅಧ್ಯಾಯದಲ್ಲಿ ನಿರ್ದಿಷ್ಟಪಡಿಸಿರುವ ನಿಯಮಗಳಿಗನುಸಾರವಾಗಿ ತಪಾಸಣೆಯ ಪ್ಲಾನನ್ನು ಸಿದ್ಧಪಡಿಸಿಕೊಳ್ಳಬೇಕಾಗಿದ್ದರೂ ತನಿಖಾದಳದ ಅಧಿಕಾರಿಗಳು ಹಾಗೆ ಮಾಡಲೇ ಇಲ್ಲ. ನಿಯಮಗಳ ಪ್ರಕಾರ ನೀಡಬೇಕಾಗಿದ್ದ ಕೇಸ್‌ಡೈರಿಗಳ ನಕಲನ್ನೂ ಕೊಟ್ಟಿರಲಿಲ್ಲ. ತನಿಖೆಯ ಪ್ರಗತಿಯ ಕುರಿತ ಪ್ರೋಗ್ರೆಸ್ ರಿಪೋರ್ಟುಗಳನ್ನೂ ನೀಡಿರಲಿಲ್ಲ. ಒಂದೆರಡು ಕಡೆ ಮಾತ್ರ ಕೇಸ್‌ಡೈರಿ ಹಾಗೂ ಪ್ರೋಗ್ರೆಸ್ ರಿಪೋರ್ಟುಗಳನ್ನು ನೀಡಿರುವುದನ್ನು ಬಿಟ್ಟರೆ ಹೆಚ್ಚಿನ ಪ್ರಕರಣಗಳಲ್ಲಿ ಇವುಗಳನ್ನು ಬರೆದಿಡಲೇ ಇಲ್ಲ.

5. ಈ ಆಯೋಗದ (ಮದನ್ ಆಯೋಗ) ಮುಂದೆ ಹಾಜರುಪಡಿಸಲಾದ ಯಾವುದೇ ದಾಖಲೆ ಅಥವಾ ಅಫಿದಾವಿತ್‌ಗಳನ್ನು ಯಾರೂ ತಮ್ಮ ಅಫಿದಾವಿತ್ ಮತ್ತು ದಾಖಲೆಗಳನ್ನು ಹಾಜರುಪಡಿಸುವ ಮೊದಲು ನೋಡಲು ಆಸ್ಪದ ನೀಡಬಾರದೆಂದು ನಮ್ಮ ಆಯೋಗವು ಜುಲೈ 7, 1970 ರಂದು ಆಜ್ಞಾಪಿಸಿದ್ದರೂ ಭಿವಂಡಿಯ ತಹಸೀಲ್ದಾರ್ ಮತ್ತು ತಾಲ್ಲೂಕು ಮೆಜಿಸ್ಟ್ರೇಟರಾದ ಜಿ. ಎಲ್. ಸಾನೆ ನಮ್ಮ ಆಯೋಗದ ಆಜ್ಞೆ ಅವರಿಗೆ ತಿಳಿದಿದ್ದರೂ ಅದನ್ನು ಉಲ್ಲಂಘಿಸಿ, ಎಕ್ಸಿಕ್ಯೂಟಿವ್ ಮೆಜಿಸ್ಟ್ರೇಟ್ ಹಾಗೂ ಜಿಲ್ಲಾ ಪೋಲೀಸ್ ಅಧಿಕಾರಿಗಳು ತಮ್ಮ ಅಫಿದಾವಿತ್‌ಗಳನ್ನು ಹಾಜರುಪಡಿಸುವ ಮೊದಲೇ ಹಲವಾರು ಅಫಿದಾವಿತ್‌ಗಳ ಪ್ರತಿಗಳನ್ನು ತನಿಖಾದಳದ ಅಧಿಕಾರಿಗಳಿಗೆ ಸರಬರಾಜು ಮಾಡಿದ್ದರು. ಹೀಗೆ ನಮ್ಮ ಆಯೋಗದ ಮುಂದೆ ಕಕ್ಷಿಗಾರರು ಏನು ಹೇಳಲಿದ್ದಾರೆಂಬುದು ತನಿಖಾದಳದ ಅಧಿಕಾರಿಗಳಿಗೆ ಮೊದಲೇ ಗೊತ್ತಾದ ಕಾರಣ ಅವರು ಅದಕ್ಕೆ ಬೇಕಾದಂತೆ ತಮ್ಮ ತಪಾಸಣೆಯನ್ನು ಸಿದ್ಧಪಡಿಸಿಕೊಂಡರು."

6. "ಮುಸ್ಲಿಮರ ಆಸ್ತಿಪಾಸ್ತಿಗಳಿಗೆ ಬೆಂಕಿ ಹಚ್ಚಲಾದ ಮತ್ತು ಮುಸ್ಲಿಮರನ್ನು ಕೊಲೆಗೈಯ್ಯಲಾದ ಅನೇಕ ಪ್ರಕರಣಗಳ ಕುರಿತು ಸರಿಯಾದ ತಪಾಸಣೆ ನಡೆಯಲೇ ಇಲ್ಲ."

7. "ಹಲವಾರು ಹಿಂದೂಗಳ ಮೇಲೆ ಹಾಕಲಾದ ಮೊಕದ್ದಮೆಗಳನ್ನು ಬೇಕೆಂದೇ 'ಎ' ಸಮ್ಮರಿ' ಪ್ರಕರಣಗಳೆಂದು ತಪ್ಪಾಗಿ ವರ್ಗೀಕರಿಸಿ ಅವರ ಮೇಲೆ ರುಜುವಾತುಪಡಿಸಲಾಗದಂತಹ ಸಣ್ಣಪುಟ್ಟ ಆಪಾದನೆಗಳನ್ನು ಮಾತ್ರ ಹೊರಿಸಲಾಗಿತ್ತು."

8. "ಸುಟ್ಟುಹೋದ ಮುಸ್ಲಿಮರ ಮನೆಗಳಿಗೆ ಸಂಬಂಧಿಸಿ ಸಿದ್ಧಪಡಿಸಲಾದ ಪಂಚನಾಮೆಯಲ್ಲಿ ಹಿಂದೂಗಳ ಮನೆಗೆ ಬೆಂಕಿಹಚ್ಚಿದ ಪ್ರಕರಣಗಳಿಗೆ ಸಂಬಂಧಪಟ್ಟ ಮುಸ್ಲಿಮರ ಮೇಲೆ ಆಪಾದನೆಹೇರಿಸಲಾದಂತಹ ಕಾಗದಪತ್ರಗಳನ್ನು ಸೇರಿಸಲಾಗಿತ್ತು ಮತ್ತು ಹಿಂದೂಗಳ ಸಾಕ್ಷಿಗಳನ್ನೇ ಮುಸ್ಲಿಮರ ಪ್ರಕರಣಗಳಲ್ಲೂ ಸಾಕ್ಷಿಗಳಾಗಿ ಕಾಣಿಸಲಾಗಿತ್ತು."

9. "ಭಿವಂಡಿ ಪ್ರದೇಶದ ಹಿಂದೂ ಕೋಮುವಾದಿ ಸಂಸ್ಥೆಗಳು ಮತ್ತು ಆರೋಪಿತ ಹಿಂದೂ ಕೋಮುವಾದಿ ಸಂಸ್ಥೆಗಳ ಸಂಘಟನೆ ಮತ್ತು ಚಟುವಟಿಕೆಗಳ ಬಗ್ಗೆ ಯಾವುದೇ ತಪಾಸಣೆ ನಡೆದಿರಲಿಲ್ಲ. ಆದರೂ ಮುಸ್ಲಿಮರ ಕೋಮುವಾದಿ ಸಂಸ್ಥೆಗಳು ಅಥವಾ ಆರೋಪಿತ ಕೋಮುವಾದಿ, ಸಂಸ್ಥೆಗಳ ಬಗ್ಗೆ ಮಾತ್ರ ತಪಾಸಣೆ ನಡೆಸಲಾಗಿತ್ತು".

10. 223 ಜನ ಮುಸ್ಲಿಮರ ಮೇಲೆ ಸುಳ್ಳು ಕೇಸೊಂದನ್ನು ದಾಖಲು ಪಡಿಸಲಾಯಿತು. ಇವರಲ್ಲಿ 16 ಮಂದಿ ಮೇ 7, 1970 ರಂದು ಸಾಯಂಕಾಲ 4.30ಕ್ಕೆ ಭುಸಾರ್ ಮೊಹಲ್ಲಾದಲ್ಲಿ ಶಿವಜಯಂತಿ ಮೆರವಣಿಗೆಗಾರರ ಮೇಲೆ ಏಕಕಾಲಕ್ಕೆ ಆಕ್ರಮಣ ನಡೆಸಬೇಕೆಂದೂ, ಜೋಣಿ ಮತ್ತು ಅಸುಪಾಸಿನ ಹಳ್ಳಿಯ ಹಿಂದೂಗಳ ಮೇಲೂ ಅವರ ಸ್ವತ್ತುಗಳ ಮೇಲೂ ಹಲ್ಲೆಮಾಡಬೇಕೆಂದೂ, ಅದಕ್ಕಾಗಿ ಮೊದಲೇ ಗೊತ್ತುಪಡಿಸಲಾಗಿರುವ ಸಂಜ್ಞೆಯೊಂದನ್ನು ಸ್ಥಳೀಯ ಕಮ್ಯುನಿಸ್ಟ್ ಮುಖಂಡ ಇಬ್ರಾಹಿಂ ಮದ್ದು ಕೊಡತಕ್ಕದ್ದೆಂದೂ ಇವರೆಲ್ಲ ಸಂಚುಮಾಡಿದರೆಂದು ಆರೋಪಿಸಲಾಯಿತು. ಈ ಹದಿನಾರು ಮಂದಿಯ ಒಳಸಂಚಿನಲ್ಲಿ ಉಳಿದ 207 ಮಂದಿ ಆಮೇಲೆ ಸೇರಿಕೊಂಡರೆಂದೂ ಆಪಾದಿಸಲಾಯಿತು."

11. "ರಾಷ್ಟ್ರೀಯ ಉತ್ಸವ ಮಂಡಲದ (ಆರ್. ಯು. ಎಮ್.) ಅಧ್ಯಕ್ಷ ಭಾಸ್ಕರಮಾಲಿ, ಸ್ಥಳೀಯ ಜನಸಂಘದ ಮತ್ತು ಆರ್. ಯು. ಎಮ್.ನ ಒಬ್ಬ ಮುಂದಾಳು ದತ್ತಾಪುಣ್ಯಾರ್ಥಿ ಮತ್ತು ಅವರ ಸಹ ಆಪಾದಿತರ ಮೇಲಿನ ಆಪಾದನೆಗಳ ತನಿಖೆ ನಡೆಯಲೇ ಇಲ್ಲ. ಇವರ ಪ್ರಕರಣಗಳನ್ನು 'ಎ' ಸಮ್ಮರಿ' ಎಂದು ವರ್ಗೀಕರಿಸಲಾಯಿತು. ಇದಕ್ಕೆ ಕ್ರೈಮ್‌ಬ್ರಾಂಚಿನ ಡಿ. ಐ. ಜಿ. ಬಿ. ಕೆ ಗೋವರ್ಧನ್ ಮತ್ತು ಎಸ್. ಪಿ ಭಾವೆ ಅವರ ಮೇಲೆ ಉನ್ನತ ಸ್ಥಾನದಲ್ಲಿರುವ ವ್ಯಕ್ತಿಯೊಬ್ಬರು ಒತ್ತಡ ಹೇರಿದುದೇ ಕಾರಣ. ಈ ಪ್ರಭಾವೀ ವ್ಯಕ್ತಿಯ ಹೆಸರನ್ನು ನಮ್ಮ ಆಯೋಗಕ್ಕೆ ಇವರು ತಿಳಿಸಿಲ್ಲ."

12. ಗಲಭೆಪ್ರಕರಣಕ್ಕೆಸಂಬಂಧಿಸಿದಂತೆ ಮೇಲಿನ ಸುಳ್ಳು ನಿರೂಪಣೆ ಮತ್ತು ಕುಯುಕ್ತಿ ಇತ್ಯಾದಿಗಳು ಕೆಲವೆಡೆ ಪಿ. ಜೆ. ಸರಾಫ್ (ಡಿವೈ. ಎಸ್. ಪಿ.), ಗೋವರ್ಧನ್ (ಡಿ. ಐ ಜಿ. ಕ್ರೈಮ್ಸ್), ಸಿ. ಪಿ. ಕುರ್ಲೆ (ಎಸ್. ಪಿ. ಕ್ರೈಮ್ಸ್), ಡಾ. ಹೆಚ್. ಜಿ. ಅಭ್ಯಂಕರ್ (ಎಸ್. ಪಿ. ರಿಸರ್ಚ್) ಇವರ ಆಣತಿಯಂತೆ ನಡೆದಿವೆ ಕೆಲಮಟ್ಟಿಗೆ ಇವರೂ ಇದರಲ್ಲಿ ಪಾಲುದಾರರಾಗಿದ್ದಾರೆ.

ಜಲಗಾಂವ್‌ನಲ್ಲಿ ತನಿಖೆ ನಡೆಸಿದ ದಳವು (Special investigation squad) ವಂಚಿಸಿ ನಟಿಸುವುದರಲ್ಲಿ ಭಿವಂಡಿಯಲ್ಲಿ ತನಿಖೆ ನಡೆಸಿದ ತನ್ನ ಸಹೋದ್ಯೋಗಿಗಳನ್ನು ಮೀರಿಸಿದೆ. ಈ ದಳದ ಕಾರ್ಯಕ್ಷಮತೆಯ ಬಗ್ಗೆ ಮದನ್ ಆಯೋಗದ ವರದಿಯಲ್ಲಿ ಹೀಗೆ ಹೇಳಲಾಗಿದೆ. "ಈ ವಿಶೇಷ ತನಿಖಾದಳ ಮಾಡಿದ ಕೆಲಸ ಮೂರು ಪ್ರಮುಖ ಮುಖಗಳನ್ನು ಹೊಂದಿದೆ. 'ವಿನಾಶಕಾರಕ', 'ಸಂರಕ್ಷಣಾತ್ಮಕ' ಮತ್ತು 'ರಚನಾತ್ಮಕ' ಇವೇ ಆ ಮೂರು ಮುಖಗಳು. ಹಲವಾರು ಗಂಭೀರ ಅಪರಾಧಿಗಳಲ್ಲಿ ಆಪಾದಿತರಾಗಿದ್ದ ಹಿಂದೂಗಳ ವಿರುದ್ಧ ಸಾಕಷ್ಟು ನಿಷ್ಪ್ರಯೋಜಕವಾದ ಸಾಕ್ಷ್ಯಗಳನ್ನು ಮಾತ್ರ ಸಂಗ್ರಹಿಸಿದುದು ಈ ಆಯೋಗಮಾಡಿದ 'ವಿನಾಶಕಾರಕ' ಕೆಲಸ. ಗಲಭೆಗಳ ವೇಳೆ ಪೋಲೀಸರು ತೋರಿಸಿದ ವರ್ತನೆ ಅಥವಾ ಗಲಭೆಗಳಲ್ಲಿ ಪೋಲೀಸ್ ಅಧಿಕಾರಿಗಳಿಗಿದ್ದ ಸಂಬಂಧ-ಇವುಗಳನ್ನು ರುಜುವಾತು ಪಡಿಸಬಲ್ಲಂತಹ ಯಾವುದೇ ಯೋಗ್ಯ ಸಾಕ್ಷಿ ಅಥವಾ ಪುರಾವೆ ಮುಂದೆ ಬಾರದಂತೆಯೂ ದಾಖಲೆಯಾಗದಂತೆಯೂ ನೋಡಿಕೊಂಡುದು ಅದರ ಸಂರಕ್ಷಣಾತ್ಮಕ ಕೆಲಸ. ಕೊನೆಯದಾಗಿ ರಚನಾತ್ಮಕ ಕಾರ್ಯವೆಂದರೆ ಕೋಮುಗಲಭೆಗೆ ಯಾವುದೇ ಒಂದು ಕಾರಣವನ್ನು ಸೃಷ್ಟಿಸಿ, ಸತ್ಯಸಂಗತಿ ಏನೇ ಇದ್ದರೂ ಹಿಂದೂ ಗಲಭೆಕೋರರು ಮುಸ್ಲಿಮರ ಮೇಲೆ ಆಕ್ರಮಣ ಮಾಡಿದುದಕ್ಕೆ ನೈತಿಕ ಸಮರ್ಥನೆಯೊದಗಿಸಿದುದು ಮತ್ತು ಆಕ್ರಮಣಮಾಡಿದವರು ಮುಸ್ಲಿಮರೆಂದೂ ಹಿಂದೂಗಳು ಅದನ್ನು ಪ್ರತಿಭಟಿಸಿದುದು ಮಾತ್ರವೆಂದೂ ತೋರಿಸಿಕೊಟ್ಟದ್ದು" ಈ ಬಗ್ಗೆ ಮದನ್ ಆಯೋಗ ಈ ರೀತಿ ಹೇಳಿದೆ.

"ಹಿಂದೂ ಗಲಭೆಕಾರರು ನಡೆಸಿದ ಕೊಲೆ, ಸುಲಿಗೆ ಮತ್ತು ಬೆಂಕಿ ಹಚ್ಚುವಿಕೆಗೆ ನೈತಿಕ ಸಮರ್ಥನೆಯೊಂದನ್ನು ಒದಗಿಸುವ ಸಲುವಾಗಿ ವಿಶೇಷ ತನಿಖಾದಳದ ಅಧಿಕಾರಿಗಳು ಈ ಕೆಳಗಿನ ಮೂರು ಕಟ್ಟುಕತೆಗಳನ್ನು ಸೃಷ್ಟಿಸಿ ಅವುಗಳ ಆಧಾರದಲ್ಲಿ ಮುಸ್ಲಿಮರ ವಿರುದ್ಧ ಸುಳ್ಳು ಮೊಕದ್ದಮೆಗಳನ್ನು ಹಾಕಿದರು.

1. ಬಹಿನಾಬಾಯಿ ಕಿಸನ್‌ರಾವ್ ಕಾಳೆ ಎಂಬ ಹಿಂದೂ ಮಹಿಳೆಯ ಮೇಲೆ ಮುಸ್ಲಿಂ ಒಬ್ಬನು ಅತ್ಯಾಚಾರ ಮಾಡಿದನೆಂದೂ ಅದರಿಂದಾಗಿ ಕೋಪಗೊಂಡ ಹಿಂದೂಗಳು ಮುಸ್ಲಿಮರ ಮೇಲೆ ಧಾಳಿ ಮಾಡಿದರೆಂದೂ ಇದು ಕೋಮುವಾರು ಗಲಭೆಗೆ ದಾರಿಮಾಡಿಕೊಟ್ಟಿತೆಂದೂ ಹೇಳಲಾಯಿತು. ಹಿಂದೂ ಮಹಿಳೆಯ ಮಾನಭಂಗ ಮಾಡಿದನೆನ್ನಲಾದ ಮುಸಲ್ಮಾನನ ಮೇಲೆ ರತ್‌ಚೌಕದಲ್ಲಿ ಬೀಡಾ ಅಂಗಡಿಯೊಂದರ ಸಮೀಪ ಹಲ್ಲೆ ಮಾಡಲಾಯಿತು. ಗಲಭೆಯಲ್ಲಿ ಗಾಯಗೊಂಡವರಲ್ಲಿ ಅವನೇ ಮೊದಲಿಗ; ಮತ್ತು ಹಿಂದೂ ಮಹಿಳೆಯ ಮಾನಭಂಗ ಮಾಡಿದ ಅಪರಾಧಕ್ಕಾಗಿ ಪೋಲೀಸರು ಮೊಕದ್ದಮೆ ಹೂಡಿರುವ ಆಪಾದಿತರಲ್ಲಿ ಅವನೂ ಒಬ್ಬ. 2. ಮನಿಯರ್ ವಾಡದಲ್ಲಿ ಉಂಟಾದ ಗಲಭೆಯನ್ನು ಮೊದಲು ಪ್ರಾರಂಭಿಸಿದವರು ಮುಸ್ಲಿಮರೇ ಎಂಬ ಕತೆ. 3. ಭಿಲ್‌ಪುರ ಮತ್ತು ಇಸ್ಲಾಂಪುರಗಳ ಗಲಭೆಗಳನ್ನೂ ಮುಸ್ಲಿಮರೇ ಪ್ರಾರಂಭಿಸಿದರು ಎಂಬ ಕತೆ. ಆದರೆ ಈ ಮೂರೂ ಮೊಕದ್ದಮೆಗಳಲ್ಲಿ ಆಪಾದಿತರಾದವರು ನಿರಪರಾಧಿಗಳೆಂದು ತೀರ್ಮಾನಿಸಲ್ಪಟ್ಟು ಬಿಡುಗಡೆ ಹೊಂದಿದ್ದಾರೆ.

ಭಿವಂಡಿ ಮತ್ತು ಜಲಗಾಂವ್‌ಗಳಲ್ಲಿ ನಡೆದ ಕೋಮುವಾರು ಗಲಭೆಗಳ ಬಗ್ಗೆ ತನಿಖೆ ನಡೆಸಿದ ಅಧಿಕಾರ ಯಂತ್ರವು ಬುಡದಿಂದ ತುದಿಯವರೆಗೂ ಮುಸ್ಲಿಂ

[6ನೇ ಪುಟ ನೋಡಿ]

ಪಿ. ಡಬ್ಲ್ಯು. ಡಿ. ಕೆಲಸಗಾರರ ಸಮ್ಮೇಳನ

ದಿ. 9-12-79ನೇ ಭಾನುವಾರ ತುಮಕೂರು ಜಿಲ್ಲೆಯ ತಿಪಟೂರಿನ ಪುರಸಭಾಭವನದಲ್ಲಿ ಕಾಮ್ರೇಡ್ ಡಿ.ಬಿ ರಾಜಣ್ಣನವರ ಅಧ್ಯಕ್ಷತೆಯಲ್ಲಿ ಸಮ್ಮೇಳನವು ಜರುಗಿತು. ಕಾಮ್ರೇಡ್ ಬಿ.ಡಿ. ರಾಮಯ್ಯನವರು ಸಮ್ಮೇಳನವನ್ನು ಉದ್ಘಾಟಿಸುತ್ತಾ ಪ. ಬಂಗಾಳ ಮತ್ತು ತ್ರಿಪುರಾ ರಾಜ್ಯಗಳಲ್ಲಿನ ಎಡರಂಗ ಸರ್ಕಾರಗಳು ರೈತ ಕಾರ್ಮಿಕರಿಗೆ ಮತ್ತು ವಿದ್ಯಾರ್ಥಿಗಳಿಗೆ ನೀಡುತ್ತಿರುವ ಸೌಲಭ್ಯಗಳನ್ನು ವಿವರಿಸಿದರು.

ತಿಪಟೂರು ತಾಲ್ಲೂಕ್ ರೈತ ಸಂಘದ ಕಾರ್ಯದರ್ಶಿ ಕಾಮ್ರೇಡ್ ಆರ್. ಎಸ್. ಚನ್ನಬಸವಣ್ಣ, ವರ್ಕ್ ಚಾರ್ಜ್ ನೌಕರರ ಸಂಘದ ಶ್ರೀ ಗಂಗಬಸವಯ್ಯ, ನಂಜುಂಡರಾಜು, ಎಸ್. ಎಫ್. ಐ. ಪ್ರಧಾನ ಕಾರ್ಯದರ್ಶಿ ಕಾಮ್ರೇಡ್ ಶಾಂತರೇಣುಕಾರಾಧ್ಯರವರು ಸಮ್ಮೇಳನಕ್ಕೆ ಬೆಂಬಲ ಕೋರಿ ಮಾತನಾಡಿದರು.

ಪಿ. ಡಬ್ಲ್ಯು.ಡಿ.ಕೆಲಸಗಾರರ ಪ್ರತಿನಿಧಿಗಳು ತಮ್ಮ ಕುಂದುಕೊರತೆಗಳ ಬಗ್ಗೆ ಚರ್ಚೆ ನಡೆಸಿ ಕನಿಷ್ಟ ಕೂಲಿ ಜಾರಿ, ವಾರದರಜೆ, ಕೆಲಸವನ್ನು ಖಾಯಂಗೊಳಿಸುವುದು, ಸಮವಸ್ತ್ರ, ಸೈಕಲ್ ಭತ್ಯ ಮುಂತಾದ ಬೇಡಿಕೆಗಳ ಈಡೇರಿಕೆಗಾಗಿ ಸಂಘದ ನೇತೃತ್ವದಲ್ಲಿ ಹೋರಾಟ ನಡೆಸಲು ತೀರ್ಮಾನಿಸಿದರು. ಬೆಂಗಳೂರಿನ ಮೈಕೋ ಕಾರ್ಮಿಕರ ಹೋರಾಟಕ್ಕೆ ಸಮ್ಮೇಳನವು ಬೆಂಬಲ ಸೂಚಿಸಿ ಸರ್ಕಾರದ ಕಾರ್ಮಿಕ ವಿರೋಧಿ ನೀತಿಯನ್ನು ಖಂಡಿಸಿತು.

ಮಧ್ಯಾಹ್ನದ ಅಧಿವೇಶನದಲ್ಲಿ ಕಾಮ್ರೇಡ್ ಪುಟ್ಟಯ್ಯ, ತಿಮ್ಮಯ್ಯ ನಾಗಯ್ಯ, ದೊಡ್ಡಯ್ಯ ಇವರುಗಳನ್ನು ಚಿಕ್ಕನಾಯ್ಕನಹಳ್ಳಿ ವಿಭಾಗದ ಕಾರ್ಯಕಾರಿ ಸಮಿತಿ ಸದಸ್ಯರನ್ನಾಗಿ ಚುನಾಯಿಸಲಾಯಿತು.

ಅಧ್ಯಕ್ಷ ಭಾಷಣ ಮಾಡುತ್ತಾ ಕಾಂ. ಡಿ. ಬಿ. ರಾಜಣ್ಣನವರು ತಮ್ಮ ವಿಯೆಟ್ನಾಂ ಭೇಟಿಯ 8 ತಿಂಗಳ ಅನುಭವ ಮತ್ತು ಅಲ್ಲಿನ ಸಮಾಜವಾದಿ ಪದ್ಧತಿಯಬಗ್ಗೆ ತಿಳಿಸುತ್ತಾ ನಮ್ಮ ದೇಶದಲ್ಲೂ ಬಂಡವಾಳಶಾಹಿಯನ್ನು ಕಿತ್ತೊಗೆದು ರೈತ ಕಾರ್ಮಿಕರ ಪರವಾದ ಸಮಾಜವಾದಿವ್ಯವಸ್ಥೆಯನ್ನು ಕಟ್ಟಲು ಕಾರ್ಮಿಕರು ಮುಂದೆ ಬರಬೇಕೆಂದು ಕರೆ ನೀಡಿದರು. ಕೆಂಬಾವುಟದ ಇತಿಹಾಸವನ್ನು ವಿವರಿಸಿದನಂತರ ತಿಪಟೂರು ಪಿ.ಡಬ್ಲ್ಯು.ಡಿ. ಕೆಲಸಗಾರರ ಸಂಘದ ಕಾರ್ಯದರ್ಶಿ ಕಾಂ. ಎಸ್.ಕೆ. ದಯಾಮಯರವರು ವಂದನಾರ್ಪಣೆ ಮಾಡಿದರು.

ಸಂಜೆ ಊರಿನ ಪ್ರಮುಖಬೀದಿಗಳಲ್ಲಿ ಪ್ರತಿನಿಧಿಗಳ ಮೆರವಣಿಗೆ ಹೊರಟು ಸರ್ವಾಧಿಕಾರಿ, ಜಾತೀವಾದಿ ಶಕ್ತಿಗಳಿಗೆ ಧಿಕ್ಕಾರ, ಮೈಕೋ ಕಾರ್ಮಿಕರ ಹೋರಾಟಕ್ಕೆ ಜಯವಾಗಲಿ, ಎಲ್ಲಾ ಜಾತಿಯ ಬಡವರೇ ಒಂದಾಗಿರಿ, ಪಿ. ಡಬ್ಲ್ಯು.ಡಿ. ಕೆಲಸಗಾರರ ಬೇಡಿಕೆಗಳು ಈಡೇರಲಿ ಎಂದು ಮುಂತಾಗಿ ಘೋಷಣೆಗಳನ್ನು ಕೂಗಿದರು. ಮೆರವಣಿಗೆಯಲ್ಲಿ ರೈತ ಸಂಘದ ಮುಖಂಡರಾದ ಕಾಂ. ಲಿಂಗೇಗೌಡ, ಸ್ಥಳೀಯ ಎಸ್. ಎಫ್. ಐ. ಮುಖಂಡರಾದ ಕಾಂ. ಜಯಶಂಕರ್, ಆರ್. ಲಿಂಗರಾಜಪ್ಪ ಹೊನ್ನೇಗೌಡ, ಬಿ. ದೇವರಾಜ್ ಮೊದಲಾದವರು ವಿದ್ಯಾರ್ಥಿಗಳ ಪರವಾಗಿ ಭಾಗವಹಿಸಿದ್ದರು.

○

ರೈತ ಕಾರ್ಮಿಕರ ಸಭೆ

ದ. ಕ. ಜಿಲ್ಲೆ, ಬಂಟ್ವಾಳ ತಾಲ್ಲೂಕಿನ ಕರ್ಪೆ ಮತ್ತು ಸಂಗಬೆಟ್ಟು ಗ್ರಾಮಗಳ ರೈತ ಕಾರ್ಮಿಕರ ಮತ್ತು ಬೀಡಿ ಮಜೂರರ ಸಂಯುಕ್ತ ಸಭೆಯು ತಾ. 4-12-79 ರಂದು ಸೀತಾರಾಮ ನಾಯ್ಕರ ಅಧ್ಯಕ್ಷತೆಯಲ್ಲಿ ಜರುಗಿತು. ಅಧ್ಯಕ್ಷರು ಸಭೆ ಸೇರಿದ ಉದ್ದೇಶವನ್ನು ವಿವರಿಸಿದರು.

ಬಳಿಕ ಬಂಟ್ವಾಳ ತಾಲ್ಲೂಕು ರೈತ ಸಂಘದ ಕಾರ್ಯದರ್ಶಿಕಾಂ. ಬಿ.ಎಚ್. ಬಂಗೇರರು ಮಾತನಾಡುತ್ತಾ ರೈತರು ಕೃಷಿ ಕೂಲಿಕಾರರು ಯಾಕೆ ಸಂಘಟಿತ ಹೋರಾಟ ಮಾಡಬೇಕೆಂಬುದಾಗಿ ವಿವರಿಸಿದರು. ಮಜೂರರ ಮೇಲಾಗುತ್ತಿರುವ ಶೋಷಣೆಯನ್ನು ತಡೆದು ಭೂತಾಕಾರದಲ್ಲಿ ಬೆಳೆದು ಬರುತ್ತಿರುವ ಕಂಟ್ರಾಕ್ಟ್ ಪದ್ಧತಿಯನ್ನು ರದ್ದುಪಡಿಸುವುದಕ್ಕೆ ಸರಕಾರವನ್ನು ಮತ್ತು ಮಾಲೀಕರನ್ನು ಒತ್ತಾಯಿಸುವುದಕ್ಕೆ ಬೀಡಿ ಮಜೂರರು ಹೆಚ್ಚಿನ ಸಂಖ್ಯೆಯಲ್ಲಿ ಒಗ್ಗಟ್ಟಾಗಬೇಕೆಂದು ಬಂಟ್ವಾಳ ತಾಲ್ಲೂಕು ಬೀಡಿ ಕೆಲಸಗಾರರ ಸಂಘದ ಕಾರ್ಯದರ್ಶಿ ಕಾಂ. ಬಿ. ನಾರಾಯಣರು ಕರೆ ನೀಡಿದರು. ಬಳಿಕ ಸೀತಾರಾಮ ಅಧ್ಯಕ್ಷ ಕೆ. ಅಹ್ಮದ್ ಉಪಾಧ್ಯಕ್ಷ, ಕೆ. ಮಹಮ್ಮದ್ ಕಾರ್ಯದರ್ಶಿ, ಕೆ. ಮಹಮ್ಮದ್ ಜೊತೆಕಾರ್ಯದರ್ಶಿಯಾಗಿರುವ 17 ಜನರ ಪ್ರಾದೇಶಿಕ ಸಮಿತಿಯನ್ನು ರಚಿಸಲಾಯಿತು. ●

ಮುಸ್ಲಿಮರಿಗೆರಕ್ಷಣೆಯಿತ್ತೆ?

[5ನೇ ಪುಟದಿಂದ]

ವಿರೋಧಿಯಾಗಿತ್ತೆಂಬುದು ಮದನ್ ಆಯೋಗದ ವರದಿಯಿಂದ ಸಂಪೂರ್ಣವಾಗಿ ಸಿದ್ಧಪಟ್ಟಿದೆ. ಹಾಗಾಗಿ ಗಲಭೆಗಳಲ್ಲಿ 93 ರಷ್ಟು ಮಂದಿ ಮುಸ್ಲಿಮರು ಮೃತರಾಗಿರುವುದೂ ಇದರಲ್ಲಿ ಹೆಂಗಸರೂ ಮಕ್ಕಳೂ ಸೇರಿರುವುದರಲ್ಲಿ ಏನೂ ಆಶ್ಚರ್ಯವಿಲ್ಲ.

ಇದು ಮುಸ್ಲಿಮರಿಗೆ 'ದಯಾಳು' ಇಂದಿರಾಗಾಂಧಿಯ ಆಡಳಿತೆಯಲ್ಲಿ ದೊರೆತ 'ಸಂರಕ್ಷಣೆ'ಯ ಕರುಣಾಜನಕ ಕತೆ.

ಮೂವತ್ತು ತಿಂಗಳ ಜನತಾ ರಾಜ್ಯಭಾರ ನಮ್ಮ ಜನರಲ್ಲಿ ಪ್ರಜಾಸತ್ತೆ ಮತ್ತು ಜಾತ್ಯತೀತ ಮನೋಭಾವವನ್ನು ಎಷ್ಟರ ಮಟ್ಟಿಗೆ ಬೆಳೆಸಿತು ಎನ್ನುವುದಕ್ಕೆ ಆಲಿಘರ್, ಜಮ್‌ಶೆಡ್‌ಪುರಗಳ ಕರ್ಮಕಾಂಡಗಳು ಸಾಕಷ್ಟು ಕೆಟ್ಟ ನಿದರ್ಶನಗಳಾಗಿವೆ. ಆಲಿಘರ್ ಮತ್ತು ಜಮ್‌ಶೆಡ್‌ಪುರದಲ್ಲಿ ಮುಸ್ಲಿಮರ ಮೇಲಾದ ದಬ್ಬಾಳಿಕೆಯ ಬಗ್ಗೆ ಇಂದಿರಾಗಾಂಧಿ ಬೇಕಾದಷ್ಟು ಮೊಸಳೆ ಕಣ್ಣೀರನ್ನು ಸುರಿಸಬಹುದು. ಆದರೆ ಇದು ಅಹಮದಾಬಾದ್, ಭಿವಂಡಿ, ಜಲಗಾಂವ್, ತುರ್ಕಮನ್‌ಗೇಟ್ ಮತ್ತು ಅಂತಹ ನೂರಾರು ಗಲಭೆಗಳ ಮತ್ತು ಮುಸ್ಲಿಮರ ಮೇಲಾದ ಪಾಶವೀ ಆಕ್ರಮಣದ ಕಹಿ ನೆನಪನ್ನು ಅಳಿಸಲಾರದು. ಇಂದಿರಾ ಆಡಳಿತೆಯಲ್ಲಿ ನಡೆದ ದುಷ್ಕೃತ್ಯಗಳ ಸ್ಮರಣೆ ಮುಸ್ಲಿಂ ಜನತೆಯ ಮನಸ್ಸಿನಲ್ಲಿ ಅಚ್ಚಳಿಯದೆ ಉಳಿಯುತ್ತದೆ.

●

ಕೊಕ್ಕೊ ಕಾರ್ಮಿಕರ ಯಶಸ್ವಿ ಹೋರಾಟ

ದ. ಕ. ಜಿಲ್ಲೆ, ಪುತ್ತೂರು ತಾಲ್ಲೂಕಿನ ಬಿಳಿನೆಲೆ ಗ್ರಾಮದಲ್ಲಿರುವ ಸರಕಾರೀ ಮಾಲಕತ್ವದ ಕೊಕ್ಕೊ ತೋಟಗಳಲ್ಲಿ ಕಳೆದ ಆರೇಳು ವರ್ಷಗಳಿಂದ ಸುಮಾರು 70ಕ್ಕೂ ಮೇಲ್ಪಟ್ಟು ಕಾರ್ಮಿಕರು ಖಾಯಂ ಆಗಿ ಕೆಲಸಗಾರರಾಗಿದ್ದು, ಅವರಿಗೆ ಖಾಯಂ ಕೆಲಸಕ್ಕಾಗಿ ಕಳೆದ ತಾ. 25-9-1979 ರಿಂದ 18 ದಿನಗಳ ಕಾಲ ಕಾರ್ಮಿಕರು ಕೊಕ್ಕೊ ತೋಟಗಳ ಮುಂಭಾಗದಲ್ಲಿ ಮತ್ತು ಕೊಕ್ಕೊ ಅಧಿಕಾರಿಗಳ ಕಚೇರಿಯೆದುರು ಹೋರಾಟ ನಡೆಸಿ ಖಾಯಂ ಕೆಲಸ ದೊರೆಯುವ ಒಪ್ಪಂದ ಏರ್ಪಟ್ಟಿತು.

ಆದರೆ ತಾ. 26-11-79 ರಿಂದ ಕೈಕಂಬ ಯೂನಿಟ್‌ನಲ್ಲಿ ಸ್ತ್ರೀಮಜೂರರಿಗೆ ಕೆಲಸ ನಿರಾಕರಿಸಿದರು. ಈಬಗ್ಗೆ ಕಾರ್ಮಿಕರು ಮತ್ತು ಕಾರ್ಮಿಕ ಮುಂದಾಳುಗಳು ಶಾಂತಿಯುತವಾಗಿ ಎಷ್ಟೇ ಒತ್ತಾಯಿಸಿದರೂ ಕೆಲಸ ಸಿಗದಾಗ ತಾ. 1-12-1979 ರಂದು ತೋಟಕ್ಕೆ ಆಗಮಿಸಿದ ಡಿ. ಎಫ್. ಓ. ರವರನ್ನು ಕಾರ್ಮಿಕರು ಘೆರಾವೊ ಮಾಡಿದರು. ಮಧ್ಯಾಹ್ನ ಎರಡು ಗಂಟೆಯಿಂದ ರಾತ್ರೆ ಎಂಟು ಗಂಟೆಯವರೆಗೂ ಬಿಡಲಿಲ್ಲ.

ಆ ವೇಳೆಗೆ ಪುತ್ತೂರಿನಿಂದ ಬಂದ ರಿಸರ್ವ್ ಪೋಲೀಸ್ ಪಡೆಯವರು ಯಾವೊಂದು ವಿಚಾರವನ್ನೂ ತನಿಖೆ ನಡೆಸದೆ ಕಾರ್ಮಿಕರ ಮೇಲೆ ಲಾಠಿ ಚಾರ್ಜುಮಾಡಿ ಚದುರಿಸಿ ಡಿ.ಎಫ್.ಓ.ರನ್ನು ಅಲ್ಲಿಂದ ಕೊಂಡುಹೋದರು. ನಂತರ ದಾರಿಯಲ್ಲಿ ಕೆಲಸಬಿಟ್ಟು ಹೋಗುವವರನ್ನೂ ಸೇರಿಸಿ ಸುಳ್ಳು ಕೇಸು ದಾಖಲೆಮಾಡಿ ಜೈಲಿಗೆ ಕಳುಹಿಸಿದರು.

ಪೋಲೀಸರ ದಬ್ಬಾಳಿಕೆಯನ್ನು ಮತ್ತು ಕೊಕ್ಕೊ ಅಧಿಕಾರಿಗಳ ವಂಚನೆಯನ್ನು ಖಂಡಿಸಿ ತಾ. 4-12-1979 ರಂದು ಸಂಜೆ ನೆಟ್ಟಣದಲ್ಲಿ ರೈಲ್ವೆ, ಕೊಕ್ಕೊ, ಸಿ. ಪಿ.ಸಿ. ಆರ್. ಐ. ಮತ್ತು ಪ್ಲೈವುಡ್ ಕಾರ್ಮಿಕರು ಸಾರ್ವಜನಿಕ ಸಭೆ ನಡೆಸಿದರು. ಈ ಸಭೆಯಲ್ಲಿ ಮಾರ್ಕ್ಸ್‌ವಾದೀ ಕಮ್ಯುನಿಸ್ಟ್ ಪಕ್ಷದ ಪುತ್ತೂರು ತಾಲ್ಲೂಕಿನ ಕಾರ್ಯದರ್ಶಿ ಕಾಂ. ಬಿ. ವಿಷ್ಣುಮೂರ್ತಿ, ಕಾಂ. ಸೂರ್ಯನಾರಾಯಣಭಟ್, ರೈಲ್ವೆ ಕಾರ್ಮಿಕ ಮುಂದಾಳು ಕಾಂ. ಗೋವಿಂದಕುಟ್ಟಿ, ಕಾಂ. ರವಿ ಮುಂತಾದವರು ಭಾಷಣ ಮಾಡಿದರು.

ಕೊನೆಗೆ ಕೊಕ್ಕೊ ಅಧಿಕಾರಿಗಳೊಂದಿಗೆ ಮಾತುಕತೆ ನಡೆದು ಎಲ್ಲಾ ಕಾರ್ಮಿಕರಿಗೆ ಮೇ 15ರ ತನಕ ಖಾಯಂ ಕೆಲಸ ಮತ್ತು ಹಾಜರಿ ಪಟ್ಟಿಯನ್ನು ಇಡುವುದಕ್ಕೆ ಅಧಿಕಾರಿಗಳು ಸಮ್ಮತಿಸಿದ್ದು, ಕೂಡಲೇ ಎಲ್ಲರಿಗೂ ಕೆಲಸ ಕೊಡಲು ಒಪ್ಪಿರುತ್ತಾರೆ.

ಈ ಹೋರಾಟದಲ್ಲಿ ಭಾಗವಹಿಸಿದ ಎಲ್ಲಾ ಕಾರ್ಮಿಕ ಬಂಧುಗಳಿಗೂ ಪುತ್ತೂರು ತಾಲ್ಲೂಕು ಸಿ. ಐ. ಟಿ. ಯು. ಪರವಾಗಿ ಅಭಿನಂದನೆಗಳು.

○

ಕೆ. ಪಿ. ಪಿ. ಡಬ್ಲ್ಯು. ಯೂನಿಯನ್ ಕಾರ್ಯಕಾರಿ ಸಮಿತಿಯ ವಿಸ್ತೃತ ಸಭೆ

ಕರ್ನಾಟಕ ಪ್ರಾವಿನ್ಷಿಯಲ್ ಪ್ಲಾಂಟೇಷನ್ ವರ್ಕರ್ಸ್ ಯೂನಿಯನ್ನಿನ ಕಾರ್ಯಕಾರಿ ಸಮಿತಿಯ ವಿಸ್ತೃತಸಭೆಯು ತಾ. 3-12-79ರಂದು ಸಂಘದ ಉಪಾಧ್ಯಕ್ಷರಾದ ಕಾಂ. ಎ. ಕೆ ವಿಶ್ವನಾಥರ ಅಧ್ಯಕ್ಷತೆಯಲ್ಲಿ ಚಿಕ್ಕಮಗಳೂರಿನ ಸಂಘದ ಆಫೀಸಿನಲ್ಲಿ ನಡೆಯಿತು.

ಸಂಘದ ಸ್ಥಾಪಕ ಅಧ್ಯಕ್ಷರು, ಕೋಲಾರದ ಚಿನ್ನದ ಗಣಿ ಕಾರ್ಮಿಕರ ಮುಖಂಡರು,ರಾಜ್ಯದ ಪ್ರಪ್ರಥಮ ಕಮ್ಯುನಿಸ್ಟ್ ಶಾಸಕರೂ ಆಗಿದ್ದ ದಿವಂಗತ ಕಾಂ. ಪಿ. ಎಸ್. ವಾಸನ್‌ರವರಿಗೆ ಶ್ರದ್ಧಾಂಜಲಿಯನ್ನರ್ಪಿಸುವ ನಿರ್ಣಯವನ್ನು ಸಭೆಯು ಅಂಗೀಕರಿಸಿತು.

ಅಗಲಿದ ನಾಯಕ ಶ್ರೀ ಜಯಪ್ರಕಾಶನಾರಾಯಣ್, ತಮಿಳುನಾಡಿನ ಶಾಸಕ ಮತ್ತು ಕಾರ್ಮಿಕ ಮುಖಂಡ ಕಾಂ. ಜಿ. ಎಸ್. ಮಣಿ, ಬಿಹಾರದ ರೈತ ಮುಖಂಡ ಕಾಂ. ರಮಾನಂದ ಸಿಂಗ್,ಕಾಂ. ಚಂದ್ರ ಸಿಂಗ್ ಘರವಾಲಿಯವರ ನಿಧನದ ಬಗ್ಗೆ ಸಂತಾಪ ಸೂಚಿಸುವ ನಿರ್ಣಯಗಳನ್ನು ಸಭೆಯು ಅಂಗೀಕರಿಸಿತು.

ಇತ್ತೀಚೆಗೆ ಪೋಲೀಸ್ ದೌರ್ಜನ್ಯಕ್ಕೆ ಬಲಿಯಾದ ಮೂಡಿಗೆರೆಯ ಬಳಿಯಿರುವ ನಾಗಪಾಲ್ ತೋಟದ ಕಾರ್ಮಿಕ ಶಂಭುರವರ ಕುಟುಂಬಕ್ಕೆ ಸಂತಾಪ ಸೂಚಿಸುವ ನಿರ್ಣಯವನ್ನು ಸಭೆಯು ಅಂಗೀಕರಿಸಿತು.

ಕಳೆದ ಸಭೆಯ ನಂತರ ಈವರೆಗೆ ದೇಶ ಮತ್ತು ರಾಜ್ಯದಲ್ಲಿ ಬದಲಾಗಿರುವ ಪರಿಸ್ಥಿತಿ, ತೋಟ ಕಾರ್ಮಿಕರ ಸಂಬಳದ ಒಪ್ಪಂದ ಮತ್ತು ಸಂಘದ ಚಟುವಟಿಕೆಗಳ ಬಗ್ಗೆ ಕಾರ್ಯದರ್ಶಿ ಕಾಂ. ಸಿ. ನಂಜುಂಡಪ್ಪನವರು ಸಭೆಗೆ ವರದಿ ಮಾಡಿದರು.

ಉಪಾಧ್ಯಕ್ಷ ಕಾಂ. ಎ. ಸಿ. ಶೇಶವರು ಶಂಭುರವರ ಮರಣದ ಬಗ್ಗೆ ಆ ಸಂಬಂಧವಾಗಿ ನಡೆದ ಚಳುವಳಿಯನ್ನು ಕುರಿತು ವಿವರವಾದ ವರದಿಕೊಟ್ಟರು.

ವರದಿಯ ಮೇಲೆ ನಡೆದ ಚರ್ಚೆಯಲ್ಲಿ ಶ್ರೀ ಅಂತೋಣಿ ಸಾಲ್ದಾನಾ, ಶ್ರೀ ಮಯಿಂದ ಮೇಸ್ತ್ರಿ, ಶ್ರೀ ಅಪ್ಪು, ಶ್ರೀ ಕಿಟ್ಟುಸ್ವಮೊದಲಾದವರು ಭಾಗವಹಿಸಿದ್ದರು. ವರದಿಯನ್ನು ಸಭೆಯು ಸರ್ವಾನುಮತದಿಂದ ಅಂಗೀಕರಿಸಿತು.

ಕಾಂ. ಎ. ಕೆ. ವಿಶ್ವನಾಥರು ಮಾತನಾಡುತ್ತಾ ಬಂಡವಾಳಗಾರರ ಪಕ್ಷಗಳಾದ ಕಾಂಗ್ರೆಸ್, ಕಾಂಗ್ರೆಸ್ (ಐ) ಮತ್ತು ಜನತಾ ಪಕ್ಷಗಳ ಆಡಳಿತದಲ್ಲಿ ಕಾರ್ಮಿಕರು ಹೆಚ್ಚು ಕಷ್ಟವನ್ನು ಅನುಭವಿಸಬೇಕಾಯಿತು. ತಮ್ಮ ಹಕ್ಕುಗಳನ್ನು ರಕ್ಷಿಸಿಕೊಳ್ಳಲು ಅಪಾರ ಬೆಲೆಯನ್ನು ತೆರಬೇಕಾಯಿತು. ತೋಟ ಕಾರ್ಮಿಕರು ತಮ್ಮ ಸಂಘಟನೆಯನ್ನು ತೀವ್ರಗತಿಯಲ್ಲಿ ವಿಸ್ತರಿಸಿ, ಬಲಪಡಿಸಿ ತಮ್ಮ ಮುಂದಿರುವ ಅಪಾಯಗಳಾದ ಸರ್ವಾಧಿಕಾರ ಮತ್ತು ಕೋಮುವಾದಿ ಶಕ್ತಿಗಳ ವಿರುದ್ಧ ಹೋರಾಟಕ್ಕೆ ಅಣಿಯಾಗಬೇಕೆಂದು ಹೇಳಿದರು.

○

ಚಂದಾ ವಿವರ

ಬಿಡಿಪ್ರತಿ	40 ಪೈಸೆ
6 ತಿಂಗಳಿಗೆ	10 ರೂ.
ಒಂದು ವರ್ಷಕ್ಕೆ	20 ರೂ.

ಆರ್ಥಿಕ ಸಮೀಕ್ಷೆ :

[3ನೇ ಪುಟದಿಂದ]

ಹೆಚ್ಚಾಯಿತು. ವ್ಯಾಪಾರಸ್ಥರಿಂದ ಅಕ್ರಮ ಒಳ್ಕೂಟ ರಚನೆ, ಅಕ್ರಮ ದಾಸ್ತಾನು, ಕಳ್ಳಸಂತೆ ವ್ಯಾಪಾರ, ಇತ್ಯಾದಿಗಳು ಅವಶ್ಯಕ ವಸ್ತುಗಳ ಕಾಯಿದೆಗನುಗುಣವಾಗಿ ಸರಕಾರ ನೀಡಿದ ಆದೇಶಗಳಿಗೆ ವಿರುದ್ಧವಾಗಿದ್ದರೂ, ಶಿಕ್ಷಾರ್ಹ ಅಪರಾಧಗಳಾಗಿದ್ದರೂ, ಇತ್ತೀಚೆಗೆ ಜಾರಿಗೆ ಬಂದ ಅವಶ್ಯಕ ವಸ್ತುಗಳ ಸುಗಮ ಸರಬರಾಜಿನ 'ಮಿನಿಮೀಸಾ' ಸುಗ್ರೀವಾಜ್ಞೆಯಂತೆ ಮುಂಜಾಗರೂಕತೆಯಾಗಿ ಅಂತಹ ಅಪರಾಧಿಗಳನ್ನು ಬಂಧಿಸಬಹುದಾಗಿದ್ದರೂ, ಘನ ಸರಕಾರವು ಕೇಂದ್ರದಲ್ಲಾಗಲೀ, ರಾಜ್ಯಗಳಲ್ಲಾಗಲೀ ಇಂತಹ ಆರ್ಥಿಕ ಅಪರಾಧಿಗಳ ವಿರುದ್ಧ ಯಾವ ಕ್ರಮಗಳನ್ನೂ ಕೈಕೊಳ್ಳಲಿಲ್ಲ! ಬದಲು, ಅಕ್ರಮ ದಾಸ್ತಾನು ತಡೆಯಲು, ಬೆಲೆ ಇಳಿಸಲು ಸಧ್ಯದ ಸಕ್ಕರೆ ದಾಸ್ತಾನನ್ನೂ ಮುಂಬರುವ ಸಕ್ಕರೆಯ ಬೆಳೆಯಲ್ಲಿಯೇ, ಕಿಲೋ ಒಂದಕ್ಕೆ ರೂ. 3-50 ರಲ್ಲಿಯೇ ಚಿಲ್ಲರೆ ಮಾರಾಟ ಮಾಡಬಹುದೆಂದು ಸರಕಾರ ಘೋಷಿಸಿತು!

ಅಕ್ರಮ ದಾಸ್ತಾನುಗಾರರಿಗೆ, ಕಳ್ಳಸಂತೆ ಕದೀಮರಿಗೆ ಸರಕಾರ ಬೋನಸ್ ನೀಡಿದಂತಾಯಿತು. ಸಧ್ಯದ ಸಕ್ಕರೆ ದಾಸ್ತಾನನ್ನೂ ಕಿಲೋ ಒಂದಕ್ಕೆ ರೂ. 3-50 ರಲ್ಲಿ ಮಾರಾಟ ಮಾಡಬಹುದು ಎಂಬ ಸರ್ಕಾರದ ನಿರ್ಧಾರದ ಉದ್ದೇಶ, ರೂ. 25 ಕೋಟಿಯಷ್ಟು ಎಕ್ಸೈಸ್ ಡ್ಯೂಟಿ ಸಂಗ್ರಹಿಸಿ ನಷ್ಟದಲ್ಲಿರುವ ಸಕ್ಕರೆ ಕಾರ್ಖಾನೆಗಳಿಗೆ ನೀಡುವುದು, ಅವುಗಳು ಕಬ್ಬುಬೆಳೆಗಾರರಿಗೆ ತಮ್ಮ ಬಾಕಿ ಮರುಪಾವತಿ ಮಾಡುವುದು, ಮಾರುಕಟ್ಟೆಗೆ ಸಾಕಷ್ಟು ಸಕ್ಕರೆ ಬಿಡುಗಡೆ ಮಾಡಿ ಬೆಲೆ ಇಳಿಸುವುದು. ಆದರೆ ಪರಿಣಾಮವಾಗಿ, ವ್ಯಾಪಾರಸ್ಥರಿಗೂ, ದಾಸ್ತಾನುಗಾರರಿಗೂ, ದಳ್ಳಾಳಿಗಳಿಗೂ ಇದರಿಂದ ಲಾಭವಾಗುವುದೇ ಹೊರತು ಗ್ರಾಹಕರಿಗಾಗಲೀ ಸಕ್ಕರೆ ಕಾರ್ಖಾನೆಗಳಿಗಾಗಲೀ ಹೆಚ್ಚಿನ ಪ್ರಯೋಜನವಾಗಲಾರದು. ಸಧ್ಯದ 25 ಲಕ್ಷ ಟನ್ ಸಕ್ಕರೆ ದಾಸ್ತಾನು ಹೆಚ್ಚಾಗಿ ಕಾರ್ಖಾನೆಯವರ ಕೈಬಿಟ್ಟು ವ್ಯಾಪಾರಸ್ಥರ ಗೋದಾಮುಗಳನ್ನು ಸೇರಿದೆ. ಆದುದರಿಂದ ಆ ದಾಸ್ತಾನಿನ ಮೇಲೆ ಸರಕಾರ ಎಕ್ಸೈಸ್ ಡ್ಯೂಟಿಗಳಿಸಲಾರದಾದರೂ, ಹೆಚ್ಚಿನ ಬೆಲೆಗೆ ಗ್ರಾಹಕರಿಗೆ ಮಾರಾಟಮಾಡಿ ವ್ಯಾಪಾರಸ್ಥರು ಅತಿ ಲಾಭ ಗಿಟ್ಟಿಸುವರು. ಸಕ್ಕರೆ ಮಾರಾಟಕ್ಕೂ ಸಾರ್ವಜನಿಕ ವಿತರಣಾ ವ್ಯವಸ್ಥೆ ಇಲ್ಲ. ಹೀಗಾಗಿ, ವ್ಯಾಪಾರಸ್ಥರು, ದಾಸ್ತಾನುಗಾರರು, ಸಕ್ಕರೆ ಸರಬರಾಜನ್ನು ಇನ್ನಷ್ಟೂ ನಿಯಂತ್ರಿಸಿ ಕೃತಕವಾಗಿ ಬೆಲೆಗಳನ್ನು ಏರಿಸಿ ಗ್ರಾಹಕರ ವೆಚ್ಚದಲ್ಲಿ ಲಾಭ ಗಿಟ್ಟಿಸುವರು. ಗ್ರಾಹಕರಿಗೆ ಸರಕಾರದಿಂದ ಯಾವ ರಕ್ಷಣೆಯೂ ಇಲ್ಲ. ಸಕ್ಕರೆ ಕಾರಖಾನೆಗಳ ನಷ್ಟ ಭರ್ತಿಮಾಡಲೂ, ಕಬ್ಬು ಬೆಳೆಗಾರರಿಗೆ ಅವರ ಬಾಕಿ ಸಂದಾಯ ಮಾಡಲೂ ಗ್ರಾಹಕರೇ ಬೆಲೆ ತೆರಬೇಕೆಂಬ ಸರಕಾರದ ನ್ಯಾಯ ಅನ್ಯಾಯವೇ ಸರಿ!

ಪರಿಹಾರ :

ಬಂಡವಾಳಶಾಹಿ ಸಮಾಜದಲ್ಲಿ ಅಧಿಕ ಉತ್ಪಾದನೆಯಿಂದ ಉತ್ಪಾದಕರಾಗಲೀ ಗ್ರಾಹಕರಾಗಲೀ ಪ್ರಯೋಜನ ಪಡೆಯಲಾರರು. ಉತ್ಪಾದನೆಯ ಮೇಲೆ, ಅವುಗಳ ಸರಬರಾಜಿನ ಮೇಲೆ, ದಾಸ್ತಾನುಗಳ ಮೇಲೆ ನಿಯಂತ್ರಣವಿರುವ ಬಂಡವಾಳಶಾಹಿಗಳೂ, ವ್ಯಾಪಾರಸ್ಥರೂ, ದಾಸ್ತಾನುಗಾರರೂ, ದಳ್ಳಾಳಿಗಳೂ ಪ್ರಯೋಜನ ಪಡೆಯುತ್ತಾರೆ. ಕೂಲಿನಿಯಂತ್ರಣದಲ್ಲಿಯೂ ಬೆಲೆಏರಿಕೆಯಲ್ಲಿಯೂ ಸರಕಾರವೂ ಅವರ ಪರವಾಗಿಯೇ ಇರುತ್ತದೆ. ಕೂಲಿ ಹೆಚ್ಚಿಸಲು, ಬೆಲೆನಿಯಂತ್ರಿಸಲು, ಉತ್ಪಾದನೆಯ ನ್ಯಾಯ ವಿತರಣೆ ಮಾಡಲು, ಸಕ್ಕರೆ, ಅಡಿಗೆತೈಲ, ಹತ್ತಿಬಟ್ಟೆ, ಸೆಣಬು, ಮುಂತಾದ ಮುಖ್ಯ ಕೈಗಾರಿಕೆಗಳನ್ನು ರಾಷ್ಟ್ರೀಕರಿಸಬೇಕು ಮತ್ತು ಅವುಗಳ ಉತ್ಪಾದನೆ, ವಿತರಣೆ ಮುಂತಾದ ಎಲ್ಲಾ ವಿಷಯಗಳಲ್ಲಿ ಕಾರ್ಮಿಕರ, ರೈತರ, ಗ್ರಾಹಕರ ಸಂಘಟನೆಗಳ ನೇರ ನಿಯಂತ್ರಣವಿರಬೇಕು.

○

ಸಾರಿಗೆ ಸೌಲಭ್ಯ ಕಲ್ಪಿಸಲು ಒತ್ತಾಯ

ಕೋಲಾರ ಜಿಲ್ಲೆಯ ಶಿಡ್ಲಘಟ್ಟ ಮತ್ತು ಚಿಂತಾಮಣಿ ತಾಲ್ಲೂಕುಗಳ ಸಂಪರ್ಕ ಸೌಲಭ್ಯಗಳನ್ನು ಪಡೆಯಲು ಸರ್ವ ಪಕ್ಷಗಳ ಹೋರಾಟ ಕ್ರಿಯಾ ಸಮಿತಿಯನ್ನು ರಚಿಸಿ, ಈ ಕೆಳಕಂಡ ರಸ್ತೆ ಮತ್ತು ಸಾರಿಗೆ ಅನುಕೂಲವನ್ನು ಸರ್ಕಾರದ ವತಿಯಿಂದ ಪಡೆಯಲು ಹೋರಾಟದ ಹಾದಿ ಹಿಡಿಯುವ ಪರಿಸ್ಥಿತಿ ಬಂದಿದೆ.

ಕೋಲಾರ ಜಿಲ್ಲೆಯ ಶಿಡ್ಲಘಟ್ಟ ಮತ್ತು ಚಿಂತಾಮಣಿ ತಾಲ್ಲೂಕುಗಳಿಗೆ ಸೇರಿರುವ ಕೈವಾರದಿಂದ ಕುಂದಲಗುರ್ಕಿ ಮಾರ್ಗವಾಗಿ ಏನುಗದಲೆಗೆ ಹೋಗುವ ರಸ್ತೆ, ಚಿಂತಾಮಣಿಯಿಂದ ಕುಂದಲಗುರ್ಕಿ ಮಾರ್ಗವಾಗಿ ಶಿಡ್ಲಘಟ್ಟ ತಾಲ್ಲೂಕಿನ ದೇವಪ್ಪನ ಗುಡಿಗೆ ಹೋಗುವ ರಸ್ತೆ, ಶಿಡ್ಲಘಟ್ಟದಿಂದ ಪಲಿಚೆರ್ಲು ಮಾರ್ಗವಾಗಿ ತಲಕಾಯಲು ಬೆಟ್ಟಕ್ಕೆ ಹೋಗುವ ರಸ್ತೆ, ಶಿಡ್ಲಘಟ್ಟದಿಂದ ಕೆ. ಮುತ್ತಗದ ಹಳ್ಳಿ ಮಾರ್ಗವಾಗಿ ಕೈವಾರಕ್ಕೆಹೋಗುವರಸ್ತೆ ಮತ್ತು ಹುಣಸೇನ ಹಳ್ಳಿ ರೈಲ್ವೆ ನಿಲ್ದಾಣದಿಂದ ಚಿಮಂಗಲ ಮಾರ್ಗವಾಗಿ ಜಂಗಮಕೋಟೆ ಕ್ರಾಸಿಗೆ ಹೋಗುವ ರಸ್ತೆ.

ಈ ರಸ್ತೆಗಳಿಗೆ ಸಂಬಂಧವಾಗಿ 28 ಗ್ರಾಮ ಪಂಚಾಯಿತುಗಳು, 160 ಹಳ್ಳಿಗಳಿಗೆ ಸೇರಿದ ಸುಮಾರು ಒಂದು ಲಕ್ಷ ಜನಗಳ ತೊಂದರೆಯನ್ನು ನಿವಾರಿಸಬೇಕೆಂಬ ವಿಚಾರದಲ್ಲಿ ಸರ್ವಪಕ್ಷಗಳ ಹೋರಾಟ ಕ್ರಿಯಾ ಸಮಿತಿ ಆಶ್ರಯದಲ್ಲಿ ತಾರೀಖು 10-12-1979 ರಂದು ಸುಮಾರು ಮೂರು ಸಾವಿರ ಜನಗಳು ಮೆರವಣಿಗೆಯಲ್ಲಿ ಹೋಗಿ ಶಿಡ್ಲಘಟ್ಟದ ತಹಸೀಲ್ದಾರರಿಗೂ ಮತ್ತು ಲೋಕೋಪಯೋಗಿ ಇಲಾಖೆ ಅಧಿಕಾರಿಗಳ ಮುಖಾಂತರ ಮುಖ್ಯಮಂತ್ರಿಗಳಿಗೂ, ಸಾರಿಗೆ ಮತ್ತು ಲೋಕೋಪಯೋಗಿ ಮಂತ್ರಿಗಳಿಗದ ಮೇಲಧಿಕಾರಿಗಳಿಗೂ ಮನವಿಪತ್ರ ಸಲ್ಲಿಸಿದರು.

ಬಹಿರಂಗ ಸಭೆಯನ್ನು ನಡೆಸಿ ಈ ವಿಚಾರದಲ್ಲಿ ಸರ್ಕಾರ ಕೂಡಲೇ ಕ್ರಮ ತೆಗೆದುಕೊಳ್ಳಬೇಕೆಂದು ಒತ್ತಾಯಿಸಲಾಯಿತು. ನಿಧಾನ ಮಾಡಿದಲ್ಲಿ ಇನ್ನೂ ತೀವ್ರವಾದ ಹೋರಾಟ ನಡೆಸಲಾಗುವುದೆಂದು ಕೋಲಾರ ಜಿಲ್ಲಾ ರೈತ ಸಂಘದ ಅಧ್ಯಕ್ಷರಾದ ಜಿ. ಪಾಪಣ್ಣ, ತಾಲ್ಲೂಕು ಅಭಿವೃದ್ಧಿ ಮಂಡಲಿ ಸದಸ್ಯರಾದ ಬಿ. ರಾಮಯ್ಯ, ವೆಂಕಟರಾಯ ಗೌಡ, ಜೆ. ದೊರೆಸ್ವಾಮಿ, ಟಿ. ನಾರಣಪ್ಪ, ಕೆ. ಎಂ. ವೆಂಕಟೇಶ್ ರವರು ನಂತರ ನಡೆದ ಬಹಿರಂಗ ಸಭೆಯಲ್ಲಿ ತಿಳಿಸಿದರು. ○

ರೆಗ್ಯುಲೇಟೆಡ್‌ಮಾರ್ಕೆಟ ನಲ್ಲಿ ಅನ್ಯವಹಾರ

ತುಮಕೂರು ರೆಗ್ಯುಲೇಟೆಡ್ ಮಾರ್ಕೆಟ್‌ಗೆ ಹೊಸದಾಗಿ ಬಂದಿರುವ ಕಾರ್ಯದರ್ಶಿಗಳು, ಮಾರ್ಕೆಟ್‌ನಲ್ಲಿ ನಡೆಯುವ ಮೂರುಕೋಟಿ ರೂಪಾಯಿ ವ್ಯವಹಾರವನ್ನು ಎಂಭತ್ತೈದು ಲಕ್ಷ ರೂಪಾಯಿ ಮಾತ್ರ ಎಂದು ಲೆಕ್ಕ ತೋರಿಸಿ, ಸರಕಾರಕ್ಕೆ 20 ಲಕ್ಷ ಕರಿಗೆ ಹಣ ನಷ್ಟವಾಗುತ್ತಿದೆ. ರೈತರಿಂದ 2% ಬದಲು 4% ದಲ್ಲಾಳಿ ಪಡೆಯುತ್ತಿರುವುದರಿಂದ 8 ಲಕ್ಷ ರೂಪಾಯಿ ನಷ್ಟವಾಗುತ್ತಿದೆ. ಇದನ್ನು ತಪ್ಪಿಸಿ, ಬೆಳೆಬಾಳುವ ಅಡಿಕೆಯನ್ನು ರೈತರು ತಂದ ತಕ್ಷಣ ಆಳತೆಮಾಡಿ ಮಾರಾಟವಾದ ಮೇಲೆ ಬಿಲ್ ಕೊಡಬೇಕೆಂದು ಕಾನೂನು ಕ್ರಮ ಜರುಗಿಸಲು. ಪ್ರಯತ್ನಿಸಿದ್ದಕ್ಕಾಗಿ ಕುಪಿತಗೊಂಡ ವರ್ತಕರು ನಾಲ್ಕು ವಾರದಿಂದ ಅಡಿಕೆ ಮಾರಾಟವನ್ನೇ ರದ್ದುಗೊಳಿಸಿದ್ದಾರೆ. ಇದರಿಂದಾಗಿ ರೈತರಿಗೆ ತುಂಬಾ ತೊಂದರೆಯಾಗಿದೆ. ಈ ಬಗ್ಗೆ ಜಿಲ್ಲಾ ರೈತಸಂಘದ ಅಧ್ಯಕ್ಷ ಕಾಂ. ಚಿಕ್ಕವೀರಯ್ಯ, ಕಾರ್ಯದರ್ಶಿ ಕಾಂ.ಚನ್ನಪ್ಪನವರು ಮಾರ್ಕೆಟ್ ಕಾರ್ಯದರ್ಶಿಗಳನ್ನು ಹಾಗೂ ಜಿಲ್ಲಾಧಿಕಾರಿಗಳನ್ನೂ ಭೇಟಿಮಾಡಿ ರೈತರಿಗೆ ಅನುಕೂಲ ಮಾಡಿಕೊಡಲು ಕೂಡಲೇ ಕ್ರಮವಹಿಸಬೇಕು ಹಾಗೂ ಬಡವರಿಗೆ ಸಹಾಯ ಮಾಡುತ್ತಿರುವ ಅಧಿಕಾರಿಗಳಿಗೆ ರಕ್ಷಣೆ ಸಿಗಬೇಕೆಂದು ಕೋರಿದ್ದಾರೆ. ○

ಬೀಡಿ ಕಾರ್ಮಿಕರ ಪ್ರಾದೇಶಿಕ ಸಭೆ

ದ.ಕ. ಜಿಲ್ಲೆ ಬಂಟ್ವಾಳ ತಾಲ್ಲೂಕಿನ ಶಂಬೂರು ಗ್ರಾಮದ ಕೊಪ್ಪಲ ಎಂಬಲ್ಲಿ ಬೀಡಿ ಮಜೂರರ ಸಭೆಯು ತಾ.1-12-79ರಂದು ಶ್ರೀಬಿ.ಮಾರಪ್ಪ ಪೂಜಾರಿಯವರ ಅಧ್ಯಕ್ಷತೆಯಲ್ಲಿ ಜರಗಿತು.

ಪ್ರಾರಂಭದಲ್ಲಿ ಬಿ.ಚಂದ್ರ ಸ್ವಾಗತಿಸಿದರು. ಬೀಡಿ ಮಜೂರರು ಸಂಘಟಿತರಾಗಿ ಬಂಟ್ವಾಳ ತಾಲ್ಲೂಕಿನ ಬೀಡಿಕೆಲಸಗಾರರ ಸಂಘಕ್ಕೆ ಸದಸ್ಯರಾಗಿ ದಿನನಿತ್ಯ ಬೀಡಿ ಮಜೂರರ ಮೇಲಾಗುತ್ತಿರುವ ಶೋಷಣೆಯನ್ನು ತಡೆಯುವುದಕ್ಕೋಸ್ಕರ ಹೋರಾಟ ನಡೆಸಿದರೆ ಬೀಡಿಕೈಗಾರಿಕೆಯಲ್ಲಿ ಆಮೂಲಾಗ್ರ ಬದಲಾವಣೆಯನ್ನು ತರಬಹುದೆಂದು ಬಂಟ್ವಾಳ ತಾಲ್ಲೂಕು ಬೀಡಿ ಕೆಲಸಗಾರರ ಸಂಘದ ಕಾರ್ಯದರ್ಶಿ ಕಾಂ. ಬಿ. ನಾರಾಯಣರು ತಿಳಿಸಿದರು.

ಬಿ.ದೇವಪ್ಪ ಅಧ್ಯಕ್ಷ, ಮಾರಪ್ಪ ಪೂಜಾರಿ ಉಪಾಧ್ಯಕ್ಷ, ಲಕ್ಷ್ಮಣಬರಿಕೆ ಕಾರ್ಯದರ್ಶಿ, ಕರಿಯನಾಯ್ಕ ಜೊತೆ ಕಾರ್ಯದರ್ಶಿಯಾಗಿರುವ ಶಂಬೂರು ಗ್ರಾಮದ ಪ್ರಾದೇಶಿಕ ಬೀಡಿ ಮಜೂರರ ಸಮಿತಿಯನ್ನು ರಚಿಸಲಾಯಿತು. ○

ಟೈವಾಕ್ ಮತ್ತು ಪ್ಲೈವುಡ್ ಕಾರ್ಮಿಕರ ಸಭೆ

ಧಾರವಾಡದಲ್ಲಿರುವ ಟೈವಾಕ್ ಫ್ಯಾಕ್ಟರಿ ಮತ್ತು ಐ.ಪಿ.ಎಮ್‌ನ ಪ್ಲೈವುಡ್ ಫ್ಯಾಕ್ಟರಿಗಳ ಕಾರ್ಯಕಾರಿ ಸಮಿತಿಗಳ ಜಂಟಿ ಸಭೆಯು ಕಾಂ. ಎಂ.ಕೆ.ದೇಶಪಾಂಡೆಯವರ ಅಧ್ಯಕ್ಷತೆಯಲ್ಲಿ ನಡೆಯಿತು. ಈ ಸಂಘಗಳು ಸ್ವಲ್ಪಕಾಲದ ಹಿಂದೆ ಸಿ.ಐ.ಟಿ.ಯು.ಗೆ ಸೇರುವ ಇಚ್ಛೆಯನ್ನು ವ್ಯಕ್ತಪಡಿಸಿದವು. ಸಿ.ಐ.ಟಿ.ಯು. ಕರ್ನಾಟಕರಾಜ್ಯಸಮಿತಿ ಪ್ರಧಾನ ಕಾರ್ಯದರ್ಶಿ ಕಾಂ. ಸಿ. ನಂಜುಂಡಪ್ಪನವರು ಮಾತನಾಡುತ್ತಾ ಸಿ.ಐ.ಟಿ.ಯು. ಧ್ಯೇಯ ಧೋರಣೆ, ಸಿ.ಐ.ಟಿ.ಯು.ಮತ್ತು ಇತರ ಕಾರ್ಮಿಕ ಸಂಘಟನೆಗಳಿಗಿರುವ ವ್ಯತ್ಯಾಸ, ಕಾರ್ಮಿಕ ಐಕ್ಯ ಹೋರಾಟಗಳಲ್ಲಿ ಸಿ.ಐ.ಟಿ.ಯು. ವಹಿಸಿರುವ ಪಾತ್ರಗಳನ್ನು ವಿವರಿಸಿದರು.

ಮುಂದಿನ ಫೆಬ್ರವರಿ ತಿಂಗಳ ಕೊನೆಯೊಳಗಾಗಿ ಪ್ಲೈವುಡ್ ಕಾರ್ಮಿಕರ ಪ್ರತಿನಿಧಿ ಸಭೆಯನ್ನು ಕರೆಯುವ ಬಗ್ಗೆ ಸಭೆಯು ವಿಚಾರ ಮಾಡಿತು.

ಈ ಸಭೆಯಲ್ಲಿ ಬೆಂಗಳೂರಿನ ಮೈಕೋ ಕಾರ್ಮಿಕರ ಹೋರಾಟಕ್ಕೆ ಸಂಪೂರ್ಣ ಬೆಂಬಲ ವ್ಯಕ್ತಪಡಿಸುವ, ಮೈಕೋ ಆಡಳಿತ ಮಂಡಳಿಯ ಉದ್ಧಟತನ ಮತ್ತು ಕಾರ್ಮಿಕ ವಿರೋಧಿ ಧೋರಣೆಯನ್ನು ಖಂಡಿಸುವ, ರಾಜ್ಯ ಸರಕಾರವು ಮೈಕೋ ಕಾರ್ಮಿಕರ ಮುಷ್ಕರವನ್ನು ನಿಷೇಧಿಸಿ ಹೊರಡಿಸಿರುವ ಆಜ್ಞೆಯನ್ನು ಖಂಡಿಸಿ, ಈ ಆಜ್ಞೆಯನ್ನು ಹಿಂತೆಗೆದುಕೊಳ್ಳಬೇಕೆಂದು ನಿರ್ಣಯವನ್ನು ಅಂಗೀಕರಿಸಿತು.

ಡಿಸೆಂಬರ್ 3 ರಂದು ಮೈಕೋ ಕಾರ್ಮಿಕರ ಹೋರಾಟವನ್ನು ಬೆಂಬಲಿಸುವ ರಾಜ್ಯಮಟ್ಟದ ಸೌಹಾರ್ದ ದಿನವನ್ನು ಧಾರವಾಡದಲ್ಲಿ ಯಶಸ್ವಿಯಾಗಿ ಆಚರಿಸುವುದಾಗಿ ಸಭಿಕರು ಆಶ್ವಾಸನೆ ಕೊಟ್ಟರು. ●

ಸರಕಾರದ ಕಾರ್ಮಿಕ ವಿರೋಧಿ ನೀತಿಯ ಖಂಡನೆ

ದ.ಕ. ಜಿಲ್ಲೆಯ ಕುಂದಾಪುರ ತಾಲ್ಲೂಕಿನಲ್ಲಿಹಂಚಿನಕಾರ್ಮಿಕರಸಂಘ, ಕೆಲಸಗಾರರಸಂಘ, ರೈತಸಂಘ ಮತ್ತು ಸೌತ್‌ಕೆನರಾ ಡಿಸ್ಟ್ರಿಕ್ಟ್ ಪ್ಲೈವುಡ್ ವರ್ಕರ್ಸ್ ಯೂನಿಯನ್ನಿನಪ್ರತಿನಿಧಿಗಳು ತಾರೀಕು 3-12-1979 ರಂದು ಮಧ್ಯಾಹ್ನ 3ಗಂಟೆಗೆ ಸರಿಯಾಗಿ ತಾಲ್ಲೂಕುತಹಸೀಲ್ದಾರರವರಿಗೆಮೈಕೊ ಕಾರ್ಮಿಕರ ಕೇಳಿಕೆಗಳನ್ನು ಈಡೇರಿಸಲು ಹಾಗೂ ಸಿಪಿಥ ಅಜ್ಞೆಯನ್ನು ಹಿಂತೆಗೆದ ಕೊಳ್ಳಬೇಕೆಂದು ಒತ್ತಾಯಿಸುವ ಮನವಿಯೊಂದನ್ನು ಅರ್ಪಿಸಿ, ಕರ್ನಾಟಕ ರಾಜ್ಯದ ಮುಖ್ಯ ಮಂತ್ರಿಯವರಿಗೆ ಕಳುಹಿಸುವಂತೆ ವಿನಂತಿಸಿಕೊಳ್ಳಲಾಯಿತು.

ಸಂಜೆ 5ಗಂಟೆಗೆ ಕುಂದಾಪುರ ಹಂಚಿನ ಮಜೂರರ ಸಂಘದ ಆಫೀಸಿನಲ್ಲಿ ಸೇರಿದ ಸಭೆಯಲ್ಲಿ. ಬೆಂಗಳೂರಿನ ಬಹುರಾಷ್ಟ್ರೀಯಕಂಪನಿಯಾದ ಮೋಟಾರ್ ಇಂಡಸ್ಟ್ರೀಸ್ ಕಂಪನಿಯಲ್ಲಿ ಸುಮಾರು ಒಂದು ತಿಂಗಳಿಂದ ತಮ್ಮ ಅನೇಕ ನ್ಯಾಯಬದ್ಧ ಬೇಡಿಕೆಗಳ ಈಡೇರಿಕೆಗಾಗಿ ನಡೆಸುತ್ತಿರುವ ಮುಷ್ಕರವನ್ನು ನಿಷೇಧಿಸಿದ ಸರ್ಕಾರದ ನೀತಿಯನ್ನು ಖಂಡಿಸಲಾಯಿತು. ಹೋರಾಟದಲ್ಲಿ ನಿರತರಾಗಿರುವ ಮೈಕೊ ಕಾರ್ಮಿಕರಿಗೆ ಸಂಪೂರ್ಣ ಬೆಂಬಲ ನೀಡಿ ಮುಷ್ಕರವನ್ನು ನಿಷೇಧಿಸಿ ಹೊರಡಿಸಿದ ಆಜ್ಞೆಯನ್ನು ಹಿಂತೆಗೆದುಕೊಳ್ಳಬೇಕೆನ್ನುವ ಹಾಗೂ ಕಾರ್ಮಿಕರ ಬೇಡಿಕೆಗಳನ್ನು ಇತ್ಯರ್ಥಗೊಳಿಸಬೇಕೆನ್ನುವ ನಿರ್ಣಯಗಳನ್ನು ಅಂಗೀಕರಿಸಿ ಸಂಬಂಧಪಟ್ಟವರಿಗೆ ಕಳುಹಿಸಲು ನಿರ್ಧರಿಸಲಾಯಿತು. ○

ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಅಭ್ಯರ್ಥಿಗಳಿಗೆ ಮತ ನೀಡಿ

[ಒಂದನೇ ಪುಟದಿಂದ]

ತರಲು ಪ್ರಯತ್ನಿಸಲಾಯಿತು. ಜಮ್‌ಷೆಡ್‌ಪುರ, ಆಲೀಘಡ್ ಮುಂತಾದ ಕಡೆ ನಡೆದ ಮತೀಯ ಗಲಭೆಗಳಲ್ಲಿ ಆರ್ ಎಸ್.ಎಸ್.ನ ಕೈವಾಡವಿದ್ದದ್ದು ಸ್ಪಷ್ಟ. ಹೀಗಾಗಿ, ಅಧಿಕಾರಕ್ಕೆ ಬಂದ ಎರಡೂವರೆ ವರ್ಷಗಳಲ್ಲಿಯೇ ಜನತಾ ಸರ್ಕಾರ ಪತನವಾಯಿತು.

ಸರ್ವಾಧಿಕಾರಿ ಇಂದಿರಾಗಾಂಧಿ ಹಾಗೂ ಜಾತೀಯವಾದಿ ಆರ್.ಎಸ್.ಎಸ್. ನಿಯಂತ್ರಿತ ಜನತಾಪಕ್ಷಗಳನ್ನು ತಿರಸ್ಕರಿಸಿ, ಬಡ ಜನತೆಯ ಹೋರಾಟದ ಹಕ್ಕುಗಳು, ಅನ್ಯಾಯದ ವಿರುದ್ಧ ಪ್ರತಿಭಟಿಸುವ, ಮಾತನಾಡುವ, ಬರೆಯುವ, ಜನಸಾಮಾನ್ಯರ ಪ್ರಜಾಸತ್ತಾತ್ಮಕ ಹಕ್ಕುಗಳನ್ನು ಎತ್ತಿ ಹಿಡಿಯುವ ಪ್ರಜಾಸತ್ತಾತ್ಮಕ ಪಕ್ಷಗಳನ್ನು ಸಮರ್ಥಿಸಬೇಕಾಗಿದೆ. ದೇಶದಲ್ಲಿ ದುಡಿಯುವ ಹಕ್ಕನ್ನು ಮೂಲಭೂತ ಹಕ್ಕನ್ನಾಗಿ ಮಾಡಲು, ಬಂಡವಾಳಶಾಹಿ ಪದ್ಧತಿ, ಜಮೀನುದಾರಿ ಪದ್ಧತಿಗಳನ್ನು ಅಳಿಸಿ ಹಾಕಲು ಪ್ರಯತ್ನಿಸುತ್ತಿರುವ ಎಡ ಪಕ್ಷಗಳಾದ ಸಿ ಪಿ ಐ (ಎಂ), ಸಿ.ಪಿ.ಐ., ಆರ್.ಎಸ್.ಪಿ., ಫಾರ್ವರ್ಡ್ ಬ್ಲಾಕ್ ಮುಂತಾದ ಎಡ ಪಕ್ಷಗಳ ಅಭ್ಯರ್ಥಿಗಳು ಗೆಲ್ಲಲೇಬೇಕಾಗಿದೆ. ಅದರಲ್ಲೂ ದೇಶದ ಅತಿದೊಡ್ಡ ಎಡ ಪಕ್ಷವಾದ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷ ಈ ಬಾರಿ ಪಾರ್ಲಿಮೆಂಟಿನಲ್ಲಿ ಎಡಪಕ್ಷಗಳ ಪ್ರಾತಿನಿಧ್ಯ ಹೆಚ್ಚಾಗುವಂತೆ ಮಾಡಲು ಶ್ರಮಿಸುತ್ತಿದೆ.

ಕರ್ನಾಟಕದಲ್ಲಿ

ಸರ್ವಾಧಿಕಾರಿ ಮತ್ತು ಕೋಮುವಾದಿ ಶಕ್ತಿಗಳನ್ನು ವಿರೋಧಿಸುವ ಎಡ ಹಾಗೂ ಪ್ರಜಾಸತ್ತಾತ್ಮಕ ಶಕ್ತಿಗಳ ಒಕ್ಕೂಟ ರಾಜ್ಯದಲ್ಲೂ ಅಸ್ತಿತ್ವಕ್ಕೆ ಬರಬೇಕೆಂಬುದು ಸಿ. ಪಿ. ಐ. (ಎಂ) ಆಸೆಯಾಗಿತ್ತು. ಆದರೆ, ರೈತ ಕಾರ್ಮಿಕರನ್ನು ದುಡಿಯುವ ಜನಸಾಮಾನ್ಯರನ್ನು ಪ್ರತಿನಿಧಿಸುವ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷಕ್ಕೆ ರಾಜ್ಯದ ಆಳುವ ಪಕ್ಷವಾದ ಅರಸು ಕಾಂಗ್ರೆಸ್‌ನವರು ಒಂದು ಸ್ಥಾನವನ್ನೂ ಬಿಟ್ಟುಕೊಡಲು ತಯಾರಿಲ್ಲ. ಕೊನೆಯ ಗಳಿಗೆಯವರೆಗೆ ನಡೆದ ಮಾತುಕತೆಗಳು ವಿಫಲವಾಗಿ ಅರಸು ಕಾಂಗ್ರೆಸ್ಸಿನವರು ಏಕಪಕ್ಷೀಯವಾಗಿ ತಮ್ಮ ಅಭ್ಯರ್ಥಿಗಳನ್ನು ಪ್ರಕಟಿಸಿದರು. ಇದರಿಂದಾಗಿ, ಸಿ.ಪಿ.ಐ (ಎಂ) ಕೂಡಾ ರಾಜ್ಯದಲ್ಲಿ ಒಂದು ರಾಜಕೀಯ ಪಕ್ಷವಾಗಿ ತನ್ನ ಅಭ್ಯರ್ಥಿಯನ್ನು ಪ್ರಕಟಿಸಿದೆ. ರಾಜ್ಯದಲ್ಲಿ ಮಂಗಳೂರು ಕ್ಷೇತ್ರದಿಂದ ಪಕ್ಷದ ಕಾರ್ಯದರ್ಶಿಯಾದ ಕಾಂ. ಮಹಾಬಲೇಶ್ವರ ಭಟ್ (ಎಂ. ಕೆ. ಭಟ್) ಸ್ಪರ್ಧಿಸುತ್ತಾರೆ.

ಕಾಂ. ಎಂ. ಕೆ. ಭಟ್ ಅಭ್ಯರ್ಥಿ

ರಾಜ್ಯದಲ್ಲಿ ಎಡ ಹಾಗೂ ಪ್ರಜಾಸತ್ತಾತ್ಮಕ ಶಕ್ತಿಗಳ ಐಕ್ಯತೆ ಅಸ್ತಿತ್ವಕೆ ಬಾರದಿದ್ದದ್ದು ವಿಷಾದಕರ. ಯಾವುದೇ ಜನಸಮೂಹವನ್ನು ಆಕರ್ಷಿಸಲು ವಿಫಲವಾಗಿರುವ ಕಾಂಗ್ರೆಸ್ ನಾಯಕರು ಕಪ್ಪೆಗಳಂತೆ ಇಂದಿರಾಗಾಂಧಿ ಪಕ್ಷಕ್ಕೆ ಓಡುತ್ತಿದ್ದಾರೆ. ರಾಜ್ಯದಲ್ಲಿ ಅನೇಕ ವಿಧಾನಸಭಾ ಸದಸ್ಯರು ಪಕ್ಷ ಬಿಡುವುದಕ್ಕೆ ಸಿದ್ಧರಾಗಿರುವಂತೆ ಕಾಣುತ್ತೆ. ಲೋಕಸಭಾ ಚುನಾವಣೆಗಳಲ್ಲಿ ಒಂದು ವೇಳೆ ಅರಸು ಕಾಂಗ್ರೆಸ್ ಸಾಕಷ್ಟು ಸಂಖ್ಯೆಯಲ್ಲಿ ಗೆಲ್ಲದಿದ್ದರೆ, ಅರಸರ ಮುಖ್ಯಮಂತ್ರಿ ಪದವಿ ಉಳಿಯುವುದೂ ಕಷ್ಟವೇ. ಆದ್ದರಿಂದ ತಮ್ಮ ಉಳಿವಿಕೆಗಾಗಿ ಅರಸರು ಜನತಾ ಪಕ್ಷವನ್ನು ಅವಲಂಬಿಸಲು ಹೊರಟರೆ ಅದು ಕಾಂಗ್ರೆಸ್ಸನ್ನು ಮತ್ತಷ್ಟು ಛಿದ್ರಗೊಳಿಸಬಹುದು.

ರಾಜ್ಯದಲ್ಲಿ ದ. ಕ. ಜಿಲ್ಲೆ, ಬೆಂಗಳೂರು, ಕೊಡಗು, ಉತ್ತರ ಕನ್ನಡ ಜಿಲ್ಲೆ ಹಾಗೂ ಇನ್ನಿತರ ಭಾಗಗಳಲ್ಲಿ ರೈತ, ಕಾರ್ಮಿಕರ ಹೋರಾಟಗಳು ಬೆಳೆಯುತ್ತಿರುವ ಈ ಸಂದರ್ಭದಲ್ಲಿ ರೈತ, ಕಾರ್ಮಿಕರು, ವಿದ್ಯಾರ್ಥಿಗಳು ಮತ್ತು ಜನಸಾಮಾನ್ಯರ ಹಿತರಕ್ಷಣೆಗಾಗಿ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಅಭ್ಯರ್ಥಿ ಕಾಂ. ಮಹಾಬಲೇಶ್ವರ ಭಟ್ (ಎಂ. ಕೆ. ಭಟ್) ರವರಿಗೆ ಮತ ನೀಡಬೇಕಾಗಿ ವಿನಂತಿ. ಪಕ್ಷದ ಚುನಾವಣಾ ನಿಧಿಗೆ ಪಕ್ಷದ ಸದಸ್ಯರು, ಹಿತೈಷಿಗಳು ಹಾಗೂ ಅಭಿಮಾನಿಗಳು ಉದಾರವಾಗಿ ಸಹಾಯ ಮಾಡಬೇಕಾಗಿ ಅರಿಕೆ.

ಭೂಮಿ ಆಕ್ರಮಣ

[2ನೇ ಪುಟದಿಂದ]

ಸುತ್ತಿದ್ದಾರೆ. ಜೀವನೋಪಾಯಕ್ಕೆ ಬೇರೆ ಯಾವ ಮಾರ್ಗವೂ ಇಲ್ಲದಿರುವ ರೈತರು ಭೂಮಿಯನ್ನು ಹಸನು ಮಾಡಿ ತಮ್ಮ ಜೀವ ಉಳಿಸಿಕೊಳ್ಳಬೇಕಾಗಿದೆ. ಕಳೆದ ಎಂಟು ವರ್ಷಗಳಿಂದ ಕಷ್ಟಪಟ್ಟು ದುಡಿಮೆ ಮಾಡುತ್ತಿರುವ ಈ ದಲಿತರ ಭೂಮಿಗಾಗಿ ನೂರಾರು ಜನ ಸತ್ಯಾಗ್ರಹ ಮಾಡಿ ಜೈಲುವಾಸ ಅನುಭವಿಸಿದ್ದಾರೆ. ಸರಕಾರ ಕೆಲವು ಕಡೆ ಜಮೀನು ಅಳತೆ ಮಾಡಿದ್ದರೂ, ಸಾಗುವಳಿ ಚೀಟಿ ಮಾತ್ರ ರೈತರಿಗೆ ಸಿಕ್ಕಿಲ್ಲ. ಸರಕಾರ ಈಗಲಾದರೂ ಗಮನ ಹರಿಸಿ ಭೂಹೀನರಿಗೆ ಜಮೀನು ಹಂಚಬೇಕೆಂದು ಕೋಲಾರ ಜಿಲ್ಲಾ ರೈತಸಂಘದ ಪ್ರಧಾನ ಕಾರ್ಯದರ್ಶಿ ಕಾಂ. ಲಕ್ಷ್ಮಣರೆಡ್ಡಿ ತಿಳಿಸಿದ್ದಾರೆ.

ಶಾಂತಿ ಸಮಿತಿ ಸಭೆ

ಚಿಕ್ಕಮಗಳೂರು ಜಿಲ್ಲೆ, ಮಲ್ಲೇಶ್ವರದ ಕುದುರೆಮುಖ ಕಬ್ಬಿಣದ ಅದಿರು ಯೋಜನೆಯಲ್ಲಿ ಕೆಲಸ ಮಾಡುತ್ತಿರುವ ಸಿ. ಐ. ಟಿ. ಯು. ಕಾರ್ಯಕರ್ತರ ಮೇಲೆ ಕಳೆದ ಹಲವಾರು ತಿಂಗಳಿಂದ ಸತತವಾಗಿ ದಾಳಿ ನಡೆಯುತ್ತಿದ್ದು, ದುಷ್ಕರ್ಮಿಗಳ ಹಾವಳಿಯಿಂದ ಈ ಪ್ರದೇಶದಲ್ಲಿ ಕಾರ್ಮಿಕರು ಶಾಂತಿಯಿಂದ ತಮ್ಮ ಚಟುವಟಿಕೆ ನಡೆಸುವುದು ಇರಲಿ ಬದುಕುವುದೂ ಕಷ್ಟವಾಗಿತ್ತು. ಆದ್ದರಿಂದ, ಕುದುರೆಮುಖ ಪ್ರದೇಶದಲ್ಲಿ ಶಾಂತಿ ನೆಲೆಸಲು ಹಾಗೂ ಕಾಂ. ಅಪ್ಪುಕುಟ್ಟನ್, ರಾಫೆಲ್, ಸೀನ, ರಾಮಣ್ಣಗೌಡ, ಕೇಳು ಕುಟ್ಟಿ, ವಿಜಯಕುಮಾರ್, ರಾಜು ಮತ್ತು ರಾಜಶೇಖರ್ ಇವರುಗಳ ಮೇಲೆ ತಾರೀಖು 30-10-79ರಂದು ನಡೆದ ಹಲ್ಲೆಗಳಿಗೆ ಕಾರಣರಾದ ದುಷ್ಕರ್ಮಿಗಳ ಮೇಲೆ ಪೋಲೀಸರು ತಕ್ಷಣ ಕ್ರಮಕೈಗೊಳ್ಳುವಂತೆ ಒತ್ತಾಯಿಸಲು ಕೇಂದ್ರ ಕೈಗಾರಿಕಾ ಭದ್ರತಾದಳದ ಅಧಿಕಾರಿ ಶ್ರೀ ಲಕ್ಷ್ಮಣರಾವ್ ರವರ ಅಧ್ಯಕ್ಷತೆಯಲ್ಲಿ ನಡೆಯಿತು. ಸಭೆಯಲ್ಲಿ ಕಾರ್ಮಿಕರ ಪ್ರತಿನಿಧಿಗಳು, ಪೋಲೀಸ್ ಅಧಿಕಾರಿಗಳು ಹಾಗೂ ಆಡಳಿತ ವರ್ಗದ ಅಧಿಕಾರಿಗಳು ಸಹಾ ಹಾಜರಿದ್ದರು.

ಚುನಾವಣೆಗಳು ಹಾಗೂ ಪತ್ರಿಕಾ ಸ್ವಾತಂತ್ರ

[ಒಂದನೇ ಪುಟದಿಂದ]

ಜನತೆಗೆ ನೀಡುತ್ತಿವೆ.

ಕಾಂಗ್ರೆಸ್ (ಐ) ತನ್ನ ಚುನಾವಣಾ ಪ್ರಣಾಳಿಕೆಯಲ್ಲಿ 1975ರ ತುರ್ತುಪರಿಸ್ಥಿತಿ ಹೇರಿದ್ದಕ್ಕೆ ಪಶ್ಚಾತ್ತಾಪವಾಗಲಿ, ಮತ್ತೆ ಪತ್ರಿಕಾ ಸ್ವಾತಂತ್ರ್ಯವನ್ನು ಕಸಿದುಕೊಳ್ಳುವುದಿಲ್ಲವೆಂಬ ವಾಗ್ದಾನವಾಗಲಿ ನೀಡಿಲ್ಲ. ಸಾಮ್ರಾಜ್ಯವಾದಿಗಳು ಪ್ರತಿಗಾಮಿ ಸಿದ್ಧಾಂತಗಳಿಗೆ ಬೆಂಬಲ ಕೊಡುತ್ತಿದ್ದಾರೆ. ಆರೆಸ್ಸೆಸ್ ಜನಸಂಘಗಳು ಈ ಅಪಾಯಕಾರಿ ಸಿದ್ಧಾಂತವನ್ನು ಜನತಾಪಕ್ಷದ ಹೆಸರಿನ ಪರದೆಯ ಮೇಲೆ ಪ್ರಚಾರ ಮಾಡುತ್ತಿದ್ದಾರೆ.

ಪ್ರಜಾಪ್ರಭುತ್ವ ಮೌಲ್ಯಗಳನ್ನು ಹಾಗೂ ಜಾತ್ಯಾತೀತತೆಯನ್ನು ಉಳಿಸಿ ಬೆಳೆಸಬೇಕಾದ ಪತ್ರಿಕೆಗಳು ಈ ಸಮಯದಲ್ಲಿ ತಮ್ಮ ಕರ್ತವ್ಯದಲ್ಲಿ ವಿಫಲವಾದರೆ, ಅದಕ್ಕಾಗಿ ದುಬಾರಿ ಬೆಲೆಯನ್ನೇ ಅವು ತೆರಬೇಕಾಗಬಹುದು.

ಎಡ ಮತ್ತು ಪ್ರಜಾಸತ್ತಾತ್ಮಕ ಶಕ್ತಿಗಳು ದೇಶವನ್ನು ಪ್ರಗತಿ ಪಥದಲ್ಲಿ ತೆಗೆದುಕೊಂಡು ಹೋಗಲು ಬದಲಿ ಕಾರ್ಯಕ್ರಮವನ್ನು ಜನಗಳ ಮುಂದಿಟ್ಟಿದೆ. ಆದರೆ ಬಹಳಷ್ಟು ಪತ್ರಿಕೆಗಳು ಎಡ ಪಕ್ಷಗಳ ಪ್ರಣಾಳಿಕೆಗಳನ್ನು ಗಮನಿಸುವ ಗೋಜಿಗೇ ಹೋಗಿಲ್ಲ, ಪತ್ರಿಕೆಗಳಲ್ಲಿ ಅಲ್ಪ ಸ್ವಲ್ಪ ಪ್ರಸ್ತಾಪ ಬಂದಿರುವುದು ಬಿಟ್ಟರೆ ಮತ್ತೇನೂ ಇಲ್ಲ. ಎಡ ಮತ್ತು ಪ್ರಜಾಸತ್ತಾತ್ಮಕ ಶಕ್ತಿಗಳ ಬಲವನ್ನು ಕಡೆಗಣಿಸುವ ಯತ್ನವೂ ನಡೆದಿದೆ. ಈ ಶಕ್ತಿಗಳು ಒಂದು ಲಕ್ಷ ಜನರ ಮೆರವಣಿಗೆ ನಡೆಸಿದರೂ, ಪತ್ರಿಕೆಗಳಲ್ಲಿ ಅದಕ್ಕೆ ಮಹತ್ವವಿಲ್ಲ. ಅದೇ, ಬಂಡವಾಳಶಾಹೀ ಪಕ್ಷಗಳು ಐದು ಸಾವಿರ ಜನರ ಮೆರವಣಿಗೆ ನಡೆಸಿದರೂ ಅದು ಬೃಹತ್ ಮೆರವಣಿಗೆಯಾಗುತ್ತೆ. ಕಾರ್ಯಕ್ರಮ ಮತ್ತು ಹೇಳಿಕೆಗಳ ಗತಿಯೂ ಇದೇ ಆಗಿದೆ.

ಪತ್ರಿಕಾ ಸಂಪಾದಕರಿಗೆ ಅನೇಕ ವಿಷಯಗಳ ಬಗ್ಗೆ ತಮ್ಮದೇ ಅಭಿಪ್ರಾಯವಿರುತ್ತದೆ. ಇದರ ಬಗ್ಗೆ ನನ್ನ ತಕರಾರಿಲ್ಲ. ಆದರೆ ಎಡ ಮತ್ತು ಪ್ರಜಾಸತ್ತಾತ್ಮಕ ಶಕ್ತಿಗಳ ಅಭಿಪ್ರಾಯವನ್ನು ಪ್ರಕಟಿಸುವುದು ಸಂಪಾದಕರ ಕರ್ತವ್ಯವಲ್ಲವೇ? ಬೇಕಾದರೆ ಸಂಪಾದಕರು ನಮ್ಮ ಅಭಿಪ್ರಾಯಗಳ ಮೇಲೆ ಟೀಕೆ ಮಾಡಲಿ, ಇದರಿಂದ ಓದುಗರಾದರೂ ವಿಷಯವನ್ನು ವಿಮರ್ಶಿಸಬಹುದು. ಚುನಾವಣೆಯಂತಹ ಕಾಲಘಟ್ಟದಲ್ಲಿ ಇದು ಮತ್ತೂ ಮುಖ್ಯವಾದದ್ದು.

ಪತ್ರಿಕೆಗಳಲ್ಲಿ ನಾವು ನೋಡುತ್ತಿರುವುದೇನು? ಪಕ್ಷಾಂತರಿಗಳು, ಒಂದು ಪಕ್ಷದ ಮುಖಂಡ ಇನ್ನೊಬ್ಬರನ್ನು ಅವಹೇಳನ ಮಾಡಿದ ಹೇಳಿಕೆಗಳು ಪತ್ರಿಕೆಗಳ ಜಾಗವನ್ನು ಅತಿಯಾಗಿ ಆಕ್ರಮಿಸಿಕೊಂಡಿವೆ. ಇತ್ತೀಚೆಗೆ ಜಗಜೀವನರಾಮ್ ಇಂದಿರಾ ಕಾಂಗ್ರೆಸ್ಸಿಗೆ ಸೇರುತ್ತಾರೆಂಬ ವದಂತಿಗಳಿಗೆ ಪತ್ರಿಕೆಗಳು ನೀಡಿದ ಪ್ರಾಮುಖ್ಯತೆಯನ್ನು ನೋಡಿದರೆ, ನಮ್ಮ ಪತ್ರಿಕಾಕರ್ತರಿಗೆ ತತ್ವ ಹೋರಾಟಗಳಿಗಿಂತ ಬಂಡವಾಳಶಾಹಿ ರಾಜಕೀಯವೇ ಮುಖ್ಯವೆಂದು ತೋರುತ್ತೆ.

ಭಾರತೀಯ ಪತ್ರಿಕೆಗಳಿಗೆ ಕೆಲವು ಸೀಮಿತ್ವವಿದೆ. ಅತ್ಯಧಿಕ ಪ್ರಸಾರವುಳ್ಳ ಪತ್ರಿಕೆಗಳು ಬಂಡವಾಳಶಾಹಿಗಳ ಕೈಯಲ್ಲಿವೆ, ಬಂಡವಾಳಶಾಹಿಗಳಿಗೆ ತಮ್ಮ ಸ್ವಂತ ಹಿತಾಸಕ್ತಿಯನ್ನು ಉಳಿಸಿಕೊಳ್ಳಬೇಕಾಗಿದೆ. ಆದ್ದರಿಂದಲೇ ಅವರು ಹೋರಾಟಗಳನ್ನು ಉತ್ಪಾದನೆಗೆ ಧಕ್ಕೆ ತರುವ ಕ್ರಮ, ರಾಷ್ಟ್ರ ವಿರೋಧಿ ಕೆಲಸ ಮುಂತಾಗಿ ಬಣ್ಣಿಸಿ ಬರೆಯುತ್ತಾರೆ. ಫರಿದಾಬಾದ್, ಘಜಿಯಾಬಾದ್‌ಗಳಲ್ಲಿ ಕೈಗಾರಿಕೋದ್ಯಮಿಗಳ ಗೂಂಡಾಗಳು ಮಾಡುವ ಕೆಲಸವನ್ನೇ, ಪತ್ರಿಕೆಗಳ ಮಾಲೀಕತ್ವ ಹೊಂದಿರುವ ಬಂಡವಾಳಶಾಹಿಗಳುಮಾಡುತ್ತಿದ್ದಾರೆ. ವಿಷಯವನ್ನು ಅರಿತಿರುವ ನಾವು ಮತ್ತಿತರ ಪ್ರಜಾಸತ್ತಾತ್ಮಕ ಶಕ್ತಿಗಳು, ಪತ್ರಿಕೆಗಳನ್ನು ಬಂಡವಾಳಶಾಹಿಗಳ ಹಿಡಿತದಿಂದ ತಪ್ಪಿಸಿ ಎಂದು ಕೇಳುತ್ತಿದ್ದೇವೆ. ಸಿ. ಪಿ. ಐ. (ಎಂ) ತನ್ನ ಚುನಾವಣಾ ಪ್ರಣಾಳಿಕೆಯಲ್ಲಿ, ಸಂವಿಧಾನದಲ್ಲಿ ಸೂಕ್ತ ಬದಲಾವಣೆಗಳನ್ನು ಮಾಡಿ ಪೂರ್ಣ ಪತ್ರಿಕಾ ಸ್ವಾತಂತ್ರ್ಯವನ್ನು ಕೊಡಬೇಕೆಂದು ಒತ್ತಾಯಿಸಿದೆ.

ಶಿಡ್ಲಘಟ್ಟ ಪೌರಕಾರ್ಮಿಕರಿಂದ ಅನಿರ್ದಿಷ್ಟ ಧರಣಿ ಸತ್ಯಾಗ್ರಹ

ತಾ.12-12-79ರ ಬೆಳಿಗ್ಗೆ 5-30 ರಿಂದ ನಲವತ್ತೊಂದು ಜನ ನೌಕರರು, ಪೌರಕಾರ್ಮಿಕರು ಕೋಲಾರ ಜಿಲ್ಲಾ, ಶಿಡ್ಲಘಟ್ಟ ಪುರಸಭೆಯ ಎದುರು ಅನಿರ್ದಿಷ್ಟ ಧರಣಿ ಸತ್ಯಾಗ್ರಹವನ್ನು ಪ್ರಾರಂಭಿಸಿದ್ದಾರೆ. ವಿಷಯವನ್ನು ತಿಳಿಸಿದ ಸತ್ಯಾಗ್ರಹದ ಮುಂದಾಳು ಶ್ರೀ ನಾಗರಾಜುರವರು, 1) ಫೆಬ್ರವರಿ, ಜುಲೈ ಮತ್ತು ನವೆಂಬರ್ ತಿಂಗಳ ತುಟ್ಟಿಭತ್ಯೆ ಕೊಡಬೇಕು, 2) ಆಗಸ್ಟ್ ತಿಂಗಳಲ್ಲಿ ಕೊಡಬೇಕಾದ ಬಟ್ಟೆ, ಸೋಪು ಇತ್ಯಾದಿಗಳನ್ನು ತಕ್ಷಣ ಕೊಡಬೇಕು, 3) ಪೌರಕಾರ್ಮಿಕರಿಗೆ ಕೆಲಸದ ವೇಳೆ ನಿಗದಿ ಮಾಡಬೇಕು, 4) ನಗರವು ಬೆಳೆಯುತ್ತಿರುವುದರಿಂದ ಮತ್ತಷ್ಟು ನೌಕರರನ್ನು ನೇಮಿಸಿಕೊಳ್ಳಬೇಕು, 5) ನೌಕರರ ಮಕ್ಕಳಿಗೆ ಉಚಿತವಾಗಿ ವಿದ್ಯಾಭ್ಯಾಸ, ಪುಸ್ತಕ ಒದಗಿಸಬೇಕು, 6) ನೌಕರರಿಗೆ ಉಪಕರಣಗಳನ್ನು ಒದಗಿಸಬೇಕು, 7) ನೌಕರರ ಮನೆಗಳ ಹತ್ತಿರ ರಸ್ತೆ, ಚರಂಡಿ ಹಾಗೂ ಶೌಚ ಕೊಠಡಿಗಳನ್ನು ಕಟ್ಟಿಸುವುದು ಮುಂತಾದ ಬೇಡಿಕೆಗಳನ್ನು ಈಡೇರಿಸುವವರೆಗೂ ಸತ್ಯಾಗ್ರಹ ಮುಂದುವರಿಸುವುದಾಗಿ ನುಡಿದರು.

ಸತ್ಯಾಗ್ರಹವನ್ನು ಬೆಂಬಲಿಸಿ, ಕೋಲಾರ ಜಿಲ್ಲಾ ಜನರಲ್ ವರ್ಕರ್ಸ್ ಯೂನಿಯನ್ ಶಿಡ್ಲಘಟ್ಟ ಶಾಖೆ ಅಧ್ಯಕ್ಷ ಕಾಂ. ಎಂ. ಎನ್. ವೆಂಕಟರಮಣಪ್ಪ, ಕಾರ್ಯದರ್ಶಿ ಕಾಂ. ಎನ್. ಮಣಿ, ಸಿ.ಪಿ.ಐ.(ಎಂ) ತಾಲ್ಲೂಕು ಕಾರ್ಯದರ್ಶಿ ಕಾಂ. ಜೆ. ದೊರೆಸ್ವಾಮಿ ಹಾಗೂ ಕಾರ್ಯಕರ್ತ ಕಾಂ. ಯೂಸುಫ್‌ರವರು ಸತ್ಯಾಗ್ರಹಿಗಳೊಂದಿಗೆ ಭಾಗವಹಿಸಿದ್ದರು. ಟೀಚರ್ಸ್ ಅಸೋಸಿಯೇಷನ್ ವತಿಯಿಂದ ಶ್ರೀ ವೆಂಕಣ್ಣನವರು ಸತ್ಯಾಗ್ರಹಕ್ಕೆ ಬೆಂಬಲ ವ್ಯಕ್ತಪಡಿಸಿದ್ದಾರೆ.

ಕಾಂ. ಜೆ. ದೊರೆಸ್ವಾಮಿಯವರು ನಗರಸಭೆ ಚೀಫ್ ಆಫೀಸರ್‌ರವರನ್ನು ಕಂಡು ಚರ್ಚಿಸಿದಾಗ ಬೇಡಿಕೆಗಳು ನ್ಯಾಯಯುತವಾಗಿವೆ, ತುಟ್ಟಿಭತ್ಯೆ ನೀಡಲುಬರೆದಿದ್ದರೂಕೌನ್ಸಿಲ್‌ಒಪ್ಪಿಲ್ಲ, ಈ ಬಗ್ಗೆ ಜಿಲ್ಲಾಧಿಕಾರಿಗಳಿಗೆ ಬರೆದಿದ್ದೇನೆ. ಎಂದು ಸಹಾನುಭೂತಿ ವ್ಯಕ್ತಪಡಿಸಿದ್ದಾರೆ.

Printed by P. Ramachandra Rao at Nutan Printing Publishing & Training Centre, 405, Sampige Road, Malleswaram, Bangalore-560 003, and Published by him on behalf of the Communist Party of India (Marxist). Karnataka State Committee, L-56, K. V. Temple Street, Sultanpet, Bangalore-560 053.
Editorial and managerial office : L-56, K. V. Temple Street, Sultanpet, Bangalore-560 053. Phone : 24154
***EDITOR* : M. K. BHAT**